ಸಂಪುಟ 01 । ಸಂಚಿಕೆ 115 । ಶುಕ್ರವಾರ 13 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**01 ) ಚರ್ಮರೋಗ ತಜ್ಞ**

ಮಂಡಳಿಯಿಂದ ಪ್ರಮಾಣೀಕೃತ ಚರ್ಮರೋಗ ತಜ್ಞರನ್ನು ಗೌರವಿಸಲು, ಚರ್ಮದ ಆರೋಗ್ಯದ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡಲು ಮತ್ತು ಕ್ಯಾನ್ಸರ್‌ನಂತಹ ಚರ್ಮದ ಸ್ಥಿತಿಗಳ ಆರಂಭಿಕ ಪತ್ತೆಹಚ್ಚುವಿಕೆಯನ್ನು ಉತ್ತೇಜಿಸಲು ಪ್ರತಿ ವರ್ಷ ಮಾರ್ಚ್ 13 ರಂದು ರಾಷ್ಟ್ರೀಯ ಚರ್ಮರೋಗ ವೈದ್ಯರ ದಿನವನ್ನು ಆಚರಿಸಲಾಗುತ್ತದೆ. 2024 ರಲ್ಲಿ ಎಲ್ಟಾಎಂಡಿ ಸ್ಕಿನ್ ಕೇರ್ ಮತ್ತು ರಾಷ್ಟ್ರೀಯ ದಿನದ ಕ್ಯಾಲೆಂಡರ್ ಸ್ಥಾಪಿಸಿದ ಈ ದಿನವು ಚರ್ಮ, ಕೂದಲು ಮತ್ತು ಉಗುರು ತಜ್ಞರ ಪರಿಣತಿಯನ್ನು ಎತ್ತಿ ತೋರಿಸುತ್ತದೆ.

**2) ಧೂಮಪಾನ ರಹಿತ ದಿನ**

ಧೂಮಪಾನ ರಹಿತ ದಿನ ಧೂಮಪಾನ ರಹಿತ ದಿನವು ಜನರು ಧೂಮಪಾನವನ್ನು ತ್ಯಜಿಸಲು ಮತ್ತು ಅದರ ಹಾನಿಕಾರಕ ಆರೋಗ್ಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಪ್ರೋತ್ಸಾಹಿಸುತ್ತದೆ. ಜಾಗೃತಿ ಕಾರ್ಯಕ್ರಮಗಳು ತಂಬಾಕಿನ ಅಪಾಯಗಳನ್ನು ಎತ್ತಿ ತೋರಿಸುತ್ತವೆ ಮತ್ತು ಆರೋಗ್ಯಕರ ಜೀವನಶೈಲಿಯ ಆಯ್ಕೆಗಳನ್ನು ಉತ್ತೇಜಿಸುತ್ತವೆ.

## ಸುಭಾಷಿತ

ಮಾತುಗಳಿಗೆ ನೋವು ಮಾಡುವ, ನೋವು ತಣಿಸುವ ಎರಡೂ ಶಕ್ತಿ ಇದೆ. ನಾವು ಹೇಗೆ ಬಳಸುತ್ತೇವೆ ಅನ್ನುವುದನ್ನು ಅವಲಂಬಿಸಿದೆ.

**ಗೌತಮ ಬುದ್ಧ**

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮೇ ಅಂತ್ಯದೊಳಗೆ ತುಂಗಭದ್ರಾ ಜಲಾಶಯದ 6 ಗೇಟ್ ಬದಲಾವಣೆ:ಡಿಕೆಶಿ

ಬೆಂಗಳೂರು: ತುಂಗಭದ್ರಾ ಜಲಾಶಯದ ಆರು ಗೇಟುಗಳನ್ನು ಮೇ ಅಂತ್ಯದೊಳಗೆ ಬದಲಾವಣೆ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಪರಿಷತ್‌ಗಿಂದು ತಿಳಿಸಿದರು. ಶೂನ್ಯವೇಳೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಟಿ.ಎ.ಶರವಣ ಅವರ ಪ್ರಸ್ತಾಪಕ್ಕೆ ಉತ್ತರಿಸಿದ ಡಿಸಿಎಂ, ಜಲಾಶಯದ ಗೇಟುಗಳು 50 ವರ್ಷಗಳಷ್ಟು ಹಳೆಯದಾಗಿದ್ದುಅವುಗಳನ್ನು ತೆಗೆದುಹಾಕಿ ಹೊಸ ಗೇಟುಗಳನ್ನು ಅಳವಡಿಸಲಾಗುವುದು ಎಂದರು.

ಈ ಜಲಾಶಯ ತೆಲಂಗಾಣ, ಆಂಧ್ರಪ್ರದೇಶ ಹಾಗೂ ಕರ್ನಾಟಕ ಸೇರಿದಂತೆ ಮೂರು ರಾಜ್ಯಗಳಿಗೆ ಸಂಬಂಧಿಸಿದಾಗಿದ್ದು, ನೆರೆಯ ರಾಜ್ಯಗಳ ಸಹಕಾರವೂ ಬೇಕಾಗಿದೆ. ಗೇಟು ಅಳವಡಿಕೆ ಮಾಡುವುದನ್ನು ಅಹಮದಾಬಾದ್



ಕಂಪನಿಗೆ ನೀಡಲಾಗಿದ್ದು, ಈಗಾಗಲೇ ಸಾಮಗ್ರಿಗಳು ಬಂದಿದ್ದು ಗೇಟು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಮಾತನಾಡಿದ ಶರವಣ, ತುಂಗಾಭದ್ರ ಜಲಾಶಯದ ಗೇಟುಗಳ ದುರಸ್ತಿ ಕಾರ್ಯವಾಗದೆ ಅಚ್ಚುಕಟ್ಟು ಪ್ರದೇಶದ ರೈತರ ಬದುಕು ಮೂರಾಬಟ್ಟೆಯಾಗಿದೆ. ಮುಂಗಾರು ಮಳೆ ಆರಂಭವಾಗುವ ಮುನ್ನ ಎಲ್ಲ ಗೇಟುಗಳನ್ನು ಅಳವಡಿಸಬೇಕು. ಇಲ್ಲಿಯವರೆಗೆ ಕೇವಲ 12 ಗೇಟುಗಳನ್ನು ಮಾತ್ರ ಮುಗಿದಿದೆ.

ಇಲ್ಲದಿದ್ದರೆ, ಕಾಲುವೆ ಮೂಲಕ ನೀರು ಹರಿಸಲು ಸಾಧ್ಯವಾಗುವುದಿಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಜಲಾಶಯದಲ್ಲಿ ಗರಿಷ್ಠ ಪ್ರಮಾಣದಲ್ಲಿ ನೀರು ಸಂಗ್ರಹಿಸಲಾಗದೆ ನೆರೆಯ ರಾಜ್ಯಗಳ ಪಾಲಾಗುತ್ತಿದೆ. ಸಮನಾಂತರ ಜಲಾಶಯ ನಿರ್ಮಾಣ ಮಾಡುವ ವಿಚಾರವೂ ನೆನೆಗುದಿಗೆ ಬಿದ್ದಿದೆ. ರಾಯಚೂರು, ಕೊಪ್ಪಳ, ಬಳ್ಳಾರಿಯಲ್ಲಿ ಭತ್ತ ಬೆಳೆಯುವ ರೈತರಿಗೂ ತೊಂದರೆಯಾಗುತ್ತಿದೆ. ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಸರ್ಕಾರ ಶೀಘ್ರವೇ ಜಲಾಶಯದ 33 ಗೇಟುಗಳನ್ನು ಅಳವಡಿಸಿ ರೈತರಿಗೆ ನೆರವಾಗಬೇಕು ಎಂದು ಆಗ್ರಹಿಸಿದರು.

# ಶ್ರೀಶೈಲ ಪಾದಯಾತ್ರೆಗಳಿಗೆ ಮಹಾಪ್ರಸಾದ ವಿತರಣೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿಯ ಬಸವೇಶ್ವರ ವೃತ್ತದ ಬಳಿಯ ವಿಷ್ಣು ಸಾಗರ ಹೋಟೆಲ್ ಹಾಗೂ ಆತ್ಮೀಯ ಬಳಗದಿಂದ ಯುಗಾದಿ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ತೆರಳುವ ಪಾದಯಾತ್ರೆಗಳಿಗೆ 8ನೇ ವರ್ಷದ ಮಹಾಪ್ರಸಾದ ಮತ್ತು ಮಜ್ಜಿಗೆ ವಿತರಣೆ ಮಾಡಲಾಯಿತು.**

ನೂರಾರು ಕಿಲೋಮೀಟರ್ ದೂರದಿಂದ ಪಾದಯಾತ್ರೆ ಕೈಗೊಳ್ಳುವ ಶ್ರೀಶೈಲ ಮಲ್ಲಿಕಾರ್ಜುನ ಭಕ್ತರಿಗೆ ಬೆಳಗಿನಜಾವ 3.30 ಕ್ಕೆ ಪ್ರಾರಂಭವಾಗುವ ಮಹಾ ಪ್ರಸಾದ ವಿತರಣೆ ನಿತ್ಯವೂ ಸಾವಿರಾರು ಮಹಿಳೆಯರು, ಯುವಕರು ಹಾಗೂ ಮಕ್ಕಳಿಗೆ ವಿತರಣೆ ಮಾಡಲಾಗುತ್ತದೆ ಎಂದು ಬಾಬು ಶೆಟ್ಟಿ, ಮಂಜುನಾಥ ಶೆಟ್ಟಿ ತಿಳಿಸಿದ್ದಾರೆ. ಚೆನ್ನಬಸ್ಸಪ್ಪಗೌಡ ರಘುನಾಥಹಳ್ಳಿ, ಬಸವರಾಜಪ್ಪಗೌಡ ಬೂದಿನಾಳ, ಗುತ್ತೆದಾರ ಗಂಗಣ್ಣ, ಗಂಜ್ ವರ್ತಕ ಮಹೇಶಗೌಡ, ಬಸ್ಸಯ್ಯ ಸ್ವಾಮಿ, ವೈಷ್ಣವಿ ಬಿ. ಲೂತಿಮಠ, ಮಲ್ಲಿಕಾರ್ಜುನ ಶಾಖವಾದಿ, ಕೃಷ್ಣಮೂರ್ತಿ ಮಲಿಯಾಬಾದ್, ಮಲ್ಲಯ್ಯ ಕಲ್ಲೂರು, ವಕೀಲ ದೇವೇಂದ್ರಪ್ಪಗೌಡ, ಉಮೇಶ ನವಲಕಲ, ದೇವರಾಜಪ್ಪ ಸಾಹುಕಾರ ಗಬ್ಬೂರು, ಬಸವರಾಜ ದೋತರಬಂಡಿ, ಸಿದ್ದಯ್ಯ ಸ್ವಾಮಿ, ಮೂರ್ತಿ, ವೀರಭದ್ರಯ್ಯ ಸ್ವಾಮಿ ಉಪಸ್ಥಿತರಿದ್ದರು.

## ಸಾಮಾಜಿಕ, ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ 371ಜೆ ಮೀಸಲಾತಿ ಅಳವಡಿಕೆ ಪ್ರಕ್ರಿಯೆ ಜಾರಿಯಲ್ಲಿದೆ: ಡಾ.ಎಂ.ಸಿ.ಸುಧಾಕರ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಬೆಂಗಳೂರಿನ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯು 371ಜೆ ಅಡಿಯಲ್ಲಿ ರಾಜ್ಯಮಟ್ಟದ ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆ. ಈ ಸಂಸ್ಥೆಯಲ್ಲಿ 371ಜೆ ಮೀಸಲಾತಿ ಅಳವಡಿಸುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ್ ಅವರು ತಿಳಿಸಿದ್ದಾರೆ.**

ರಾಯಚೂರು ಜಿಲ್ಲೆಯ ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 921ಕ್ಕೆ ಕರ್ನಾಟಕ ವಿಧಾನಸಭೆಯಲ್ಲಿ ಮಾರ್ಚ 12ರಂದು ಲಿಖಿತ ಉತ್ತರ ನೀಡಿರುವ ಸಚಿವರು, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಬೋಧಕೇತರ ಸಿಬ್ಬಂದಿಗಳ ನೇಮಕಾತಿಯ 371ಜೆ ಮೀಸಲಾತಿಗೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ



ಅಧ್ಯಯನ ಸಂಸ್ಥೆಯು ಸಮಿತಿಯನ್ನು ರಚಿಸಿಕೊಂಡಿದ್ದು, ಈ ಸಮಿತಿಯು ಮಾಡುವ ಶಿಫಾರಸ್ಸುಗಳನ್ನೊಳಗೊಂಡ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಸಂಸ್ಥೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಶೇ.45:50 ಅನುಪಾತದಲ್ಲಿ ವೇತನುದಾನ ಮಂಜೂರು ಮಾಡಲಾಗುತ್ತಿದೆ. ಬಾಕಿ ಶೇ.5ರಷ್ಟು ಅನುದಾನವನ್ನು ಸಂಸ್ಥೆಯು ತನ್ನ ಸ್ವಂತ ಸಂಪನ್ಮೂಲದಿಂದ ಭರಿಸುತ್ತಿದೆ. ಈ ಸಂಸ್ಥೆಗೆ ಪ್ರಾಧ್ಯಾಪಕರ ಹುದ್ದೆಗಳು, ಸಹ ಪ್ರಾಧ್ಯಾಪಕರ ಹುದ್ದೆಗಳು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿವೆ. ಈ ಸಂಸ್ಥೆಯಲ್ಲಿ ನೇಮಕಾತಿಗಳನ್ನು ಸರ್ಕಾರದ ನಿಯಮಗಳಂತೆ ನಡೆಸಲಾಗುತ್ತದೆ ಎಂದು ಸಚಿವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.


## ಜಾಲಹಳ್ಳಿಯ ಮುಸ್ಲಿಂ ಬಾಂಧವರ ಕಬರಸ್ಥಾನದಲ್ಲಿ ಆಕಸ್ಮಿಕ ಬೆಂಕಿ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಮಾ 12 ಗ್ರಾಮದ ಮುಸ್ಲಿಂ ಬಾಂಧವರ ಕಬರಸ್ಥಾನದಲ್ಲಿರುವ ಸರ್ವೇ ನಂಬರ್ 205 ಮತ್ತು 160ರಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಅಲ್ಲಿ ಇದ್ದ ಹಸಿರಾದ ಗಿಡಗಳು ಸುಟ್ಟು ಭಸ್ಮವಾಗಿವೆ.**

ಸುದ್ದಿ ತಿಳಿದ ತಕ್ಷಣ ಕಬರಸ್ಥಾನ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಬೆಂಕಿ ಮುಂದಕ್ಕೆ ಪಸರಿಸದಂತೆ ಬಹಳ ಶ್ರಮವಹಿಸಿ ನೀರಿನಿಂದ ಬೆಂಕಿಯನ್ನು ನಂದಿಸಿದರು. ಕಬರಸ್ಥಾನ ಸಮಿತಿಯ ಸದಸ್ಯರು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ ಸಂಪೂರ್ಣವಾಗಿ ಬೆಂಕಿ ನಂದಿಸುವವರೆಗೆ ಅಲ್ಲೇ ಇದ್ದು ಸ್ವಚ್ಛತಾ ಕಾರ್ಯವೂ ನಡೆಸಿದರು. ಕಬರಸ್ಥಾನ ಸಮಿತಿಯ ಪದಾಧಿಕಾರಿಗಳು ತೋರಿದ ತ್ವರಿತ ಕಾರ್ಯಾಚರಣೆ ಮತ್ತು ಸೇವಾ ಮನೋಭಾವ ಸ್ಥಳೀಯರಿಂದ ಪ್ರಶಂಸೆಗೆ ಪಾತ್ರವಾಗಿದೆ.

ಈ ಬೆಂಕಿ ನಂದಿಸುವ ಕಾರ್ಯದಲ್ಲಿ





ಕಬರಸ್ಥಾನ ಸಮಿತಿಯ ಅಧ್ಯಕ್ಷರಾದ ಹೈದರ್ ಸಾಬ್ ಮುಲ್ಲಾ, ಕಾರ್ಯದರ್ಶಿಯಾದ ಕುರ್ಷಿದ್ ಪಟೇಲ್, ಖಜಾಂಚಿಯಾದ ಇಮಾಮ್ ಸಾಬ್ ಉದ್ದಾರ್ ಸದಸ್ಯರಾದ ಜಹೀರ್ ಮುರ್ಷೀದ್ ಹಾಗೂ ಆರಿಫ್ ಗ್ರಾಮದ ಮುಖಂಡರಾದ ಹನುಮಂತರಾಯ





# ಹ್ಯೂಮನ್ ಪ್ಯಾಪೀಲೋಮ ವೈರಸ (HPV) ಲಸಿಕೆಯ ಕುರಿತು ಮಕ್ಕಳಲ್ಲಿ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಪ್ರಾಥಮಿಕ ಆರೋಗ್ಯ ಕೇಂದ್ರ ದಡೇಸೂಗುರ್ ವ್ಯಾಪ್ತಿಗೆ ಒಳಪಡುವ ಆಯುಷ್ಮಾನ್ ಆರೋಗ್ಯ ಕೇಂದ್ರ ಗೊರೆಬಾಳ ಸರ್ಕಾರಿ ಪ್ರೌಢಶಾಲೆ ಇವರ ಸಯುಕ್ತ ಆಶ್ರಯದಲ್ಲಿ, ಗೊರೆಬಾಳ ಗ್ರಾಮದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಶ್ರೀಮತಿ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಾತನಾಡಿ ಎಚ್ ಪಿ ವಿ (HPV) ಲಸಿಕೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.**

ಎಚ್ ಪಿ ವಿ ಲಸಿಕೆ ಎಂದರೆ ಹ್ಯೂಮನ್ ಪ್ಯಾಪಿಲೋಮ ವೈರಸ್ ನಿಂದ ಉಂಟಾಗುವ ಜನನಾಂಗದ ನರಹುಲಿಗಳು ಗುದದ್ವಾರ





ಗಂಟಲು ಮತ್ತು ತಲೆ ಕುತ್ತಿಗೆ ಕ್ಯಾನ್ಸರ್ ಗಳಿಂದ ರಕ್ಷಣೆ ನೀಡುತ್ತದೆ 9 ರಿಂದ 45 ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿಗೆ ಈ ಲಸಿಕೆ ಅತ್ಯಂತ ಪರಿಣಾಮಕಾರಿ ಹೆಣ್ಣು ಮಕ್ಕಳಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವಿಕೆ ಕ್ಯಾನ್ಸರ್ ಪೂರ್ವ ಸ್ಥಿತಿಗಳ ನಿರ್ವಹಣೆ ಕ್ಯಾನ್ಸರ್ ಗೆ ಕಾರಣವಾಗುವ ಎಚ್ ಪಿ ವಿ ತಳಿಗಳಿಂದ ಉಂಟಾಗುವ ಕೋಶಗಳ ಬದಲಾವಣೆಯನ್ನು ತಡೆಯುತ್ತದೆ ಜನನಾಂಗದ ನರಹುಲಿಗಳ ಕ್ಯಾನ್ಸರಗಳ ತಡೆಗಟ್ಟುವಿಕೆ ಈ ಲಸಿಕೆಯನ್ನು ಪಡೆಯುವ ಸಮಯ 9 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಎರಡು ಡೋಸ್ ಗಳನ್ನು ಶಿಫಾರಸ್ಸು ಮಾಡಲಾಗುತ್ತದೆ ಲೈಂಗಿಕ ಚಟುವಟಿಕೆಗಳ ಪ್ರಾರಂಭವಾಗುವ ಮೊದಲು ಲಸಿಕೆ ಪಡೆಯುವುದು ಅತ್ಯಂತ ಪರಿಣಾಮಕಾರಿ 15ರಿಂದ 45 ವರ್ಷ ವಯಸ್ಸಿನವರೆಗೂ ಇದು ಪ್ರಯೋಜನಕಾರಿಯಾಗಿದೆ ಭಾರತದಲ್ಲಿ





ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಲಭವಿದೆ.

ಲಸಿಕೆ ಹಾಕಿದ ಜಾಗದಲ್ಲಿ ನೋವು ಊಟ ಅಥವಾ ಲಘು ಜ್ವರ ಇರಬಹುದು ಲಸಿಕೆ ಪಡೆಯುವ ಮೊದಲು ನಿಮ್ಮ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆಯುವುದು ಉತ್ತಮ ಎಚ್ ಪಿ ವಿ ಲಸಿಕೆಯು ಹೊಸದೇನಲ್ಲ ಜಗತ್ತಿನಾದ್ಯಂತ ಈಗಾಗಲೇ 50 ಕೋಟಿ ಲಸಿಕೆಗಳನ್ನು ನೀಡಲಾಗಿದೆ ಕಳೆದ 15 ವರ್ಷಗಳ ಅಂಕಿ ಅಂಶಗಳು ಎಚ್ ಪಿ ವಿ ಲಸಿಕೆ ಸುರಕ್ಷತಾ ಮತ್ತು ಪರಿಣಾಮಕಾರಿ ಎಂದು ಸಾಬೀತುಪಡಿಸಿವೆ ಬೇರೆ ಬೇರೆ ದೇಶಗಳಲ್ಲಿ 10ವರ್ಷದಲ್ಲಿ ಕ್ಯಾನ್ಸರ್ ಪೂರ್ವ ಲಕ್ಷಣಗಳು ಕಡಿಮೆಯಾಗಿದೆ ನಂತರ ಸಾಂಕ್ರಾಮಿಕ ರೋಗಗಳ ಕುರಿತು ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ವಿಷಪೂರಿತ ಆಹಾರ ಸೇವನೆಯ ಮಾಡಬಾರದು ನಂತರ ಧೂಮಪಾನ ರಹಿತ ದಿನ ಬಗ್ಗೆ ನಿಮ್ಮ ಶ್ವಾಸಕೋಶ ಬೂದಿಪಾತ್ರೆಯಲ್ಲ ಧೂಮಪಾನದ ಹವ್ಯಾಸ ಬಿಡಿ ಮುಕ್ತವಾಗಿ ಉಸಿರಾಡಿ ದಂದು ಆರೋಗ್ಯಕರ ಭವಿಷ್ಯದತ್ತ ಹೆಜ್ಜೆ ಇಡಿ ತಂಬಾಕನಲ್ಲ ಉತ್ತಮ ಜೀವನವನ್ನು ಆರಿಸಿ. ಸಮಯಕ್ಕೆ ಸರಿಯಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಆಗಾಗೆ ಬಗ್ಗೆ ಪರೀಕ್ಷೆಯನ್ನ ಮಾಡಿಸಬೇಕೆಂದು ಹೇಳಲಾಯಿತು ಸದರಿ ಕಾರ್ಯಕ್ರಮದಲ್ಲಿ ಶ್ರೀಮತಿ ಅಂಬಮ್ಮ ಪಿಎಚ್ ಸಿಇಒ, ಚಾಂದ್ ಬಾಷಾ ಸಿ ಎಚ್ ಓ, ಶಿವರೆಡ್ಡಿ ಮುಖ್ಯ ಗುರುಗಳು, ನಿಲೋಪರ್ ಮೇಡಂ, ಶ್ವೇತಾ, ಪದ್ಮಾ, ಗಂಗಾಧರ್ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಮದ್ಯಪಾನದ

ಮದ್ಯದ ಹನಿ ತುಟಿಗೆ ತಾಗಿದಾಗ
ಮನಸ್ಸು ಕ್ಷಣಕೆ ಮರೆತು ಹೋಗುತ್ತದೆ,
ಆದರೆ ಅದರ ನೆರಳಲ್ಲಿ
ಜೀವನದ ಬೆಳಕು ಮಂಕಾಗುತ್ತದೆ.

ಮೊದಲು ಸ್ನೇಹದಂತೆ ಬರುತ್ತದೆ,
ನಂತರ ಅಭ್ಯಾಸವಾಗಿ ಹಿಡಿದುಕೊಳ್ಳುತ್ತದೆ,
ಒಂದು ದಿನ ಅದು
ಜೀವನವನ್ನೇ ಬಂಧಿಯಾಗಿ ಮಾಡುತ್ತದೆ.

ಕುಟುಂಬದ ನಗು ಮೌನವಾಗುತ್ತದೆ,
ಕಣ್ಣೀರು ಮಾತಾಗುತ್ತದೆ,
ಮದ್ಯದ ಮಂಜಿನಲ್ಲಿ
ಸಂತೋಷದ ದಾರಿ ಕಣ್ಮರೆಯಾಗುತ್ತದೆ.

ಸಮಯದಲ್ಲಿ ತಡೆಯುವವನೇ
ನಿಜವಾದ ವಿಜಯಿ,
ಆರೋಗ್ಯವೇ ನಿಜವಾದ ಸಂಪತ್ತು
ಎಂದು ಅರಿಯುವವನೇ ಧನ್ಯನು.

ಮದ್ಯವಿಲ್ಲದ ಜೀವನದಲ್ಲಿ
ಸಂತೋಷದ ಬೆಳಕು ಹೆಚ್ಚು,
ಸ್ವಚ್ಛ ಮನಸ್ಸು, ಆರೋಗ್ಯದ ದಾರಿ
ಅದೇ ಜೀವನದ ನಿಜವಾದ ಗೆಲುವು.

ಅಮರೇಶ್

## ಉದ್ಯೋಗ ಪಡೆದು ಉದ್ಯೋಗ ಸೃಷ್ಟಿಸುವ ಮಾಲಕರಾಗಿ: ಯಂಕೋಬರಡ್ಡಿ

ನೈಜ್ಯ ದೆಸೆ ನ್ಯೂಸ್

**ಸ್ವಯಂ ಉದ್ಯೋಗ ಮಾಡುವ ಕೌಶಲ್ಯವನ್ನು ಬೆಳಸಿಕೊಂಡು ನೂರಾರು ಜನರಿಗೆ ಉದ್ಯೋಗ ಸೃಷ್ಟಿ ಮಾಡುವ ಮಾಲಕರಾಗಿ ಎಂದು ನಗರದ ಎಲ್ ಬಿ.ಕೆ ಪದವಿ ಪೂರ್ವ ಮತ್ತು ನೊಬಲ್ ಪದವಿ ಮಹಾವಿದ್ಯಾಲಯದಲ್ಲಿ ನಡೆದ ಬೃಹತ್ ಉದ್ಯೋಗ ಮೇಳದ ಉದ್ಘಾಟನೆ ಮಾಡಿ ಊಆಈಊ ಬ್ಯಾಂಕಿನ ಮ್ಯಾನೇಜರಾದ ಯಂಕೋಬರಡ್ಡಿ ಮಾತಾನಾಡಿದರು.**

ಈ ಸಂದರ್ಭದಲ್ಲಿ SBI ಬ್ಯಾಂಕಿನ ಮ್ಯಾನೆಜರ್ ಈಗಲು ಶ್ರೀನಿವಾಸ ಮತಾನಡಿ,ಉ-ದ್ಯೋಗ ಮಾಡಿದರೆ ಕುಟುಂಬ ನಡೆಸಬಹುದು ಉದ್ಯೋಗ ಕೋಡುವ ಕೈಗಳಾದರೆ ನೂರಾರು ಜನರ ಬದುಕಿಗೆ ಆಶ್ರಯಕೊಟ್ಟಂತಾಗುತ್ತದೆ ಎಂದರು ಪಾಟೀಲ ಶಿಕ್ಷಣ ಸಂಸ್ಥೆಯ ಅದ್ಯಕ್ಷರಾದ ಖ.ಸಿ ಪಾಟೀಲ್ ಮಾತಾನಾಡುತ್ತಾ, ಉದ್ಯೋಗಂ ಪುರಷ ಲಕ್ಷಣಂ ಎನ್ನುವ ಕಾಲ ಇಂದು ಬದಲಾಗಿದೆ .ಪ್ರಸ್ತುತ ಮಹಿಳೆಯರು ಉದ್ಯೋಗದ ಕಡೆ ಮೊರೆಯಿಡುತ್ತಿರವುದು ಆಶದಾಯಕ ಇಂದು ದೇಶದ ಪ್ರಗತಿಗೆ ಯುವ ಜನತೆಯ ಉದ್ಯೋಗ ಅವಶ್ಯ. ವೇತನ ಎಷ್ಟೇ ಇದ್ದರೂ ಇಚ್ಚಿಪಟ್ಟು ಕೆಲಸ ಮಾಡಿ ಸ್ವಾಲಂಬನೆ ಬದುಕು ಕಟ್ಟಿಕೊಳ್ಳಲು ಕರೆ ನೀಡಿದರು.ಉದ್ಯೋಗ ಮಾಡಿದರೆ ನಮ್ಮ



ಕುಟುಂಬ ಬದುಕುತ್ತೆ ಆದರೆ ಕೆಲಸ ಕೊಡುವ ಮಾಲಕರಾದ ಇತರರನ್ನು ಬದುಕುಸುತ್ತೆ,ಶಿಕ್ಷಣದ ಜೊತೆಗೆ ಉದ್ಯೋಗ ಕೊಡುವ ಮಾರ್ಗದರ್ಶನ ಮಾಡಿ ಉದ್ಯೋಗದಾತರ ಕೇಲಸವಮಾಡುತ್ತಿರುವ ಸಂಸ್ಥೆಯ ಕೆಲಸ ಶ್ಲಾಘನೀಯ ಎಂದರು.

ಆದಿ ಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ವಿದ್ಯಾ ವಿಷಯಕ್ ಪರಿಷತ್ತಿನ ಸದಸ್ಯರಾದ ಅನೀಲಕುಮಾರ ಮಾತಾನಾಡಿ ಉದ್ಯೋಗದಾತರು ಸರಿಯಾದ ಸಿದ್ದತೆಯನ್ನು ಮಾಡಿಕೊಂಡು ಸಂದರ್ಶನವನ್ನು ಕೌಶಲ್ಯ ದೊಂದಿಗೆ ಭಾಗವಹಿಸಿ .ಆರ್ಥಿಕ ಶಕ್ತಿಯಿಂದ ಕುಟುಂಬ ನೆಡಸಲು ನೆರವಾಗಿ ,ಉದ್ಯೋಗದ ಜೊತೆಗೆ ಮುಂದೊಂದು ದಿನ ನೀವೂ ಉದ್ಯೋಗದಾತರಾಗಿ ಪರಿವರ್ತನೆ ಆಗಲು ಕರೆ ನೀಡಿದರು. ಮತ್ತೊರ್ವ ಗೌರವ ಉಪಸ್ಥಿತರಾದ ಆದಿ ಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ವಿದ್ಯಾ ವಿಷಯಕ್ ಪರಿಷತ್ತಿನ ಸದಸ್ಯರಾದ ಸತ್ಯನಾರಾಯಣ ಶ್ರೇಷ್ಠಿ ಮಾತಾನಡಿ ಶಿಕ್ಷಣ ಸಂಸ್ಥೆಗಳು ಉದ್ಯೋಗ ಕೊಡುವ ಕೆಲಸ ಮಾಡಲ್ಲ ಬದಲಾಗಿ ಉದ್ಯೋಗ ಪಡೆಯವ ವಿವಿಧ ಕೌಶಲ್ಯವನ್ನು ಕಲಿಸುತ್ತದೆ ಪ್ರತಿಭಗೆತಕ್ಕಂತೆ ಉದ್ಯೋಗ ಪಡೆದುಕೊಳ್ಳಲು ಕರೆ ನೀಡಿದರು. ಸಂದರ್ಭದಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಂಯೋಜಕರು ಮಾತನಾಡಿ ಈ ಸಮರ್ಥನಂ ಅಂಗವಿಕಲರ ಸಂಸ್ಥೆ ಉದ್ಯೋಗದಾರತರಿಗೆ ಅವರ ಅವರ ಪ್ರತಿಬೆ ಕೌಶಲ್ಯ ಅನುಭವ ,ಸಂವಹನ ಕೌಶಲ್ಯ ಆದ-ರಿಸಿ ತಮಗೆ ಉದ್ಯೋಗ ಹರಿಸಿ ಬರುತ್ತವೆ.ಆದ-ರೆ ಉದ್ಯೋಗಕ್ಕೆ ಆಯ್ಕೆ ಆದಂತಹ ಅಭ್ಯರ್ಥಿಗಳು ಸ್ಥಳ ಆಯ್ಕೆ ವಿಷಯದಲ್ಲಿ ದೂರ ಎಂದು ಉದ್ಯೋಗ ಕರ್ತವ್ಯಕ್ಕೆ ಹಾಜರಾಗದಿರವುದು ವಿಶಾಷದನೀಯ ಸಂಗತಿ ಎಂದರು. ಉದ್ಯೋಗ ಮೇಳದಲ್ಲಿ 600 ಕ್ಕೂ ಹೆಚ್ಚು ಅಬ್ಯಾರ್ಥಿಗಳು ನೊಂದಾಣಿ ಮಾಡಿಕೊಂಡು ಭಾಗವಹಿಸಿದ್ದರು.

25 ಕ್ಕೂ ಹೆಚ್ಚು ಕಂಪನಿಗಳು ಮುಕ್ತ ಅವಕಾಶ ನೀಡಿದ್ದವು. ಈ ಸಂದರ್ಬದಲ್ಲಿ ಸಂಸ್ಥೆಯ ಅದ್ಯಕ್ಷರಾದ ಪರಶುರಾಮ ಮಲ್ಲಾಪುರ ಕಾರ್ಯಕ್ರಮದ ಅದ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಶ್ರೀಮತಿ ಐಶ್ವರ್ಯ ದಳವಾಯಿ ಪ್ರಾಸ್ತಾವಿಕ ಮಾತನಾಡಿದರು.ಸಂಸ್ಥೆಯ ಕಾರ್ಯದರ್ಶಿಯಾದ ಡಾ.ಅರುಣಕುಮಾರ ಬೇರ್ಗಿ ಖಾಜಾಂಚಿಗಳಾದ ಜಯಪ್ಪ ಗೊರೇಬಾಳ ,ಉಪದ್ಯಾಕ್ಷರಾದ ಶಂಕರ್ ಪತ್ತಾರ್,ಎಲ್ ಬಿ ಕೆ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಶಿವುಕುಮಾರ ಬಿಂಗಿ ,ಉದ್ಯೋಗ ಸ್ಥಳ ನೀಯೋಜನೆಯ ಸಂಚಲಕಾರದ ವೆಂಕೋಬ ಉಪಸ್ಥಿತಿರಿದ್ದರು. ಉಪನ್ಯಾಸಕಿ ಕು ಜ್ಯೋತಿ ನಿರೂಪಿಸಿದರು, ಪಂಪಾಪತಿ ಸ್ವಾಗತಿಸಿದರು ಮರಿಸ್ವಾಮಿ ನಂಜಲದಿನ್ನಿ ವಂದಿಸಿದರು.

## ಹಾಲಾಪೂರ: ಬಾಲಕರ ಹಾಸ್ಟೆಲ್ ನಲ್ಲಿ ವಾರ್ಷಿಕೋತ್ಸವ ಸಮಾರಂಭ

ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮದಲ್ಲಿರುವ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸರ್ಕಾರಿ ಪ್ರೌಢಶಾಲೆಯ ಭೂದಾನಿಗಳಾದ ದಿವಂಗತ ಬಸವರಾಜಪ್ಪಗೌಡ್ರು 9ನೇ ವರ್ಷದ ಪುಣ್ಯಸ್ಮರಣೆ ಹಾಗೂ ಸರಸ್ವತಿ ಪೂಜೆ ಕಾರ್ಯಕ್ರಮ ನಡೆಯಿತು.**

ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳಾದ ಸುಭಾಷ್ ಸಿಂಗ್ ಹಜಾರೆ ಮಾತನಾಡುತ್ತಾ ವಿದ್ಯಾರ್ಥಿಗಳು ಈ ಒಂದು ವಸತಿ ನಿಲಯದಲ್ಲಿ 5 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿ ಇಂದು 10ನೇ ತರಗತಿ ಪರೀಕ್ಷೆಗೆ ಬರೆಯುತ್ತಿದ್ದು, ಈ ಒಂದು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ವಸತಿ ನಿಲಯಕ್ಕೆ, ಕಲಿತ ಶಾಲೆಗೆ ಒಳ್ಳೆಯ ಹೆಸರು ತರುವ ಕೆಲಸ ಮಾಡಬೇಕು, ಅಕ್ಷರ ಜೊತೆಗೆ ಸಂಸ್ಕಾರ ಮೈಗೂಡಿಸಿಕೊಂಡು ಜೀವನದಲ್ಲಿ ಯಶಸ್ವಿ ಪುರುಷರಾಗಿ ಜೀವನ ಮಾಡಬೇಕೆಂದು ಹೇಳಿದರು. ಈ ವೇಳೆಯಲ್ಲಿ ಮಲ್ಲಪ್ಪ ಮುಖ್ಯ ಗುರುಗಳು, ವೆಂಕೋಬ ಪ್ರಿನ್ಸಿಪಾಲರು, ಹಾಸ್ಟೆಲ್ ವಾರ್ಡನ್ ಬಸವರಾಜ ಬಳಗಾನೂರ, ಸಿದ್ದು ಬಿ, ಸಿದ್ದಾರ್ಥ ಪ್ರೊ.ಪಾ, ರವೀಂದ್ರ ಕುಂಬಾರ, ಬಾಬುರಾವ್, ಕೃಷ್ಣಮೂರ್ತಿ, ಕಿರಣ್ ಕುಮಾರ, ನಿಲಯದ ಸಹಾಯಕರಾದ ರಾಜಶೇಖರರೆಡ್ಡಿ, ರಮೇಶ, ಹುಲಿಗೆಮ್ಮ, ಮಂಜಮ್ಮ ಹಾಗೂ ವಿದ್ಯಾರ್ಥಿಗಳು ಇದ್ದರು.

## ಬಾಲಕರ ಹಾಸ್ಟೆಲ್ ನಲ್ಲಿ ವಾರ್ಷಿಕೋತ್ಸವ ಸಮಾರಂಭ



ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮದಲ್ಲಿರುವ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸರ್ಕಾರಿ ಪ್ರೌಢಶಾಲೆಯ ಭೂದಾನಿಗಳಾದ ದಿವಂಗತ ಬಸವರಾಜಪ್ಪಗೌಡ್ರು 9ನೇ ವರ್ಷದ ಪುಣ್ಯಸ್ಮರಣೆ ಹಾಗೂ ಸರಸ್ವತಿ ಪೂಜೆ ಕಾರ್ಯಕ್ರಮ ನಡೆಯಿತು.**

ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳಾದ ಸುಭಾಷ್ ಸಿಂಗ್ ಹಜಾರೆ ಮಾತನಾಡುತ್ತಾ ವಿದ್ಯಾರ್ಥಿಗಳು ಈ ಒಂದು ವಸತಿ ನಿಲಯದಲ್ಲಿ 5 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿ ಇಂದು 10ನೇ ತರಗತಿ ಪರೀಕ್ಷೆಗೆ ಬರೆಯುತ್ತಿದ್ದು, ಈ ಒಂದು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ವಸತಿ ನಿಲಯಕ್ಕೆ, ಕಲಿತ ಶಾಲೆಗೆ ಒಳ್ಳೆಯ ಹೆಸರು ತರುವ ಕೆಲಸ ಮಾಡಬೇಕು, ಅಕ್ಷರ ಜೊತೆಗೆ ಸಂಸ್ಕಾರ ಮೈಗೂಡಿಸಿಕೊಂಡು ಜೀವನದಲ್ಲಿ ಯಶಸ್ವಿ ಪುರುಷರಾಗಿ ಜೀವನ ಮಾಡಬೇಕೆಂದು ಹೇಳಿದರು.

ಈ ವೇಳೆಯಲ್ಲಿ ಮಲ್ಲಪ್ಪ ಮುಖ್ಯ ಗುರುಗಳು, ವೆಂಕೋಬ ಪ್ರಿನ್ಸಿಪಾಲರು, ಹಾಸ್ಟೆಲ್ ವಾರ್ಡನ್ ಬಸವರಾಜ ಬಳಗಾನೂರ, ಸಿದ್ದು ಬಿ, ಸಿದ್ದಾರ್ಥ ಪ್ರೊ.ಪಾ, ರವೀಂದ್ರ ಕುಂಬಾರ, ಬಾಬುರಾವ್, ಕೃಷ್ಣಮೂರ್ತಿ, ಕಿರಣ್ ಕುಮಾರ, ನಿಲಯದ ಸಹಾಯಕರಾದ ರಾಜಶೇಖರರೆಡ್ಡಿ, ರಮೇಶ, ಹುಲಿಗೆಮ್ಮ, ಮಂಜಮ್ಮ ಹಾಗೂ ವಿದ್ಯಾರ್ಥಿಗಳು ಇದ್ದರು.

## ಮಾರ್ಚ್ 16ರಂದು ಪಾಲಿಕೆ ಮುಂಗಡ ಪತ್ರ ಪೂರ್ವಭಾವಿ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯಿಂದ 2026–27ನೇ ಸಾಲಿನ ಮುಂಗಡ ಪತ್ರವನ್ನು ತಯಾರಿಸಲು ಮಾರ್ಚ್ 16ರ ಬೆಳಿಗ್ಗೆ 10.30 ಗಂಟೆಗೆ ಜೋನಲ್ 01ರ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು,**

ನೋಂದಾಯಿತ ಸ್ಥಳೀಯ ಕಲ್ಯಾಣ ಸಂಘ, ವ್ಯಾಪಾರ, ಉದ್ಯಮ ನಡೆಸುವ ಸಂಘ–ಸಂಸ್ಥೆಯಿಂದ ಎನ್.ಜಿ.ಓ. ಸಂಘಗಳು ಸೇರಿದಂತೆ ಇತರೆ ಪ್ರಮುಖ ನಾಗ–ರಿಕರು ಭಾಗಿಯಾಗಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಯು ಪರೀಕ್ಷೆ ಹಿಂದಿ ವಿಷಯಕ್ಕೆ 29 ವಿದ್ಯಾರ್ಥಿಗಳು ಗೈರು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2026ರ ಮಾರ್ಚ್ 12ರ ಗುರುವಾರ ನಡೆದ ಹಿಂದಿ ವಿಷಯದಲ್ಲಿ 29 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.**

ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ನಡೆದ ಹಿಂದಿ ವಿಷಯದಲ್ಲಿ ಪರೀಕ್ಷೆಗೆ 1,351 ವಿದ್ಯಾರ್ಥಿಗಳು ನೋಂದಣಿಯಾಗಿದ್ದ ಪೈಕಿ 1,322 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, 29 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತ್ರಿಭುವನ ಹೋಂಡಾ ಶೋರೂಮ್ ನಲ್ಲಿ ಅಪ್ಡೇಟ್ ವರ್ಷನ್ ಹೋಂಡಾ ಶೈನ್ ಬೈಕ್, ಡಿಯೋ ಸ್ಕೂಟಿ ಲಾಂಚ್

ನೈಜ್ಯ ದೆಸೆ ನ್ಯೂಸ್

**ನಗರದ ಗಂಗಾವತಿ ರಸ್ತೆಯಲ್ಲಿರುವ ತ್ರಿಭುವನ ಹೋಂಡಾ ಶೋರೂಮ್ ನಲ್ಲಿ ಮಾ.12ಗುರುವಾರ ಹೊಸ ಅಪ್ಡೇಟ್ ಬೈಕ್ ಹೋಂಡಾ ಶೈನ್–125 ಲಿಮಿಟೆಡ್ ಎಡಿಷನ್, ಹಾಗೂ ಡಿಯೋ–125 ಎಕ್ಸ್ ಎಡಿಷನ್ ಸ್ಕೂಟಿಯನ್ನ ಸಂಸ್ಥೆಯ ಮಾಲೀಕರಾದ ತಿಮ್ಮಣ್ಣ ಸಾಹುಕಾರ್ ಕುರುಕುಂದ, ಹೋಂಡಾದ ಜೋನಲ್ ಮೆನೇಜರ್ ಪ್ರವೀಣ್ ಶರ್ಮಾ, ಹಾಗೂ ಏರಿಯಾ ಸೇಲ್ಸ್ ಮೆನೇಜರ್ ಪ್ರಕಾರ್ ಮಿಶ್ರಾ, ತ್ರಿಭುವನ ಹೋಂಡಾ ಶೋರೂಮ್ ವ್ಯವಸ್ಥಾಪಕ ಅನಿಲಗೌಡ ಹಾಗೂ ಸಿಬ್ಬಂದಿ ವರ್ಗದವರು ಸೇರಿ ಲಾಂಚ್ ಮಾಡಿದರು.**

ವಿಭಿನ್ನ ವಿಶೇಷತೆಯುಳ್ಳ ಉತ್ತಮ ಗುಣಮಟ್ಟದ ಹೋಂಡಾ ಶೈನ್–125 ಬೈಕ್ ಇದು ರೈತರಿಗೆ ಹಾಗೂ ಯುವಕರಿಗೆ ತುಂಬಾ ಉಪಯುಕ್ತವಾದ ಬೈಕ್ ಆಗಿದೆ ಅಲ್ಲದೇ, 75



ಕಿ.ಮೀ.ಗಿಂತಲೂ ಅಧಿಕ ಮೈಲೇಜ್ ಕೊಡುವ ಹೋಂಡಾ ಶೈನ್–100 ಡಿಎಕ್ಸ್ ಬೈಕ್ ಆಗಿದೆ. ಹಾಗೂ ಡಿಯೋ–125 ಎಕ್ಸ್ ಎಡಿಷನ್ ಸ್ಕೂಟಿಯು ಕೂಡ ಉತ್ತಮ ಮೈಲೇಜ್ ಹೊಂದಿದೆ. ಇದು ಮಹಿಳೆಯರಿಗೆ, ಯುವತಿಯರಿಗೆ, ಹಾಗೂ ಕುಟುಂಬದ ಹಿರಿಯ ಸದಸ್ಯರಿಗೆ ಅತ್ಯಂತ ತುಂಬಾ ಉಪಯೋಗದ ಸ್ಕೂಟಿಯಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸಿಂಧನೂರಿನ ತ್ರಿಭುವನ ಹೋಂಡಾ ಶೋರೂಮ್ ಗೆ ಭೇಟಿ ನೀಡಿ, ಬೈಕ್ ಮತ್ತು ಸ್ಕೂಟಿಯ ಸದುಪಯೋಗ ಪಡೆದುಕೊಳ್ಳಲು ಸಂಸ್ಥೆಯ ಮಾಲೀಕರಾದ ತಿಮ್ಮಣ್ಣ ಸಾಹುಕಾರ್ ಕುರುಕುಂದ ತಿಳಿಸಿದರು. ಈ ಹೋಂಡಾ ಶೈನ್ ಅತಿ ಹೆಚ್ಚು ಮಾರಾಟವಾಗುವ ಬೈಕ್ ಆಗಿದೆ. ರೂ.8 ರಿಂದ 10 ಸಾವಿರವರೆಗೂ ಕ್ಯಾಸ್ ಡಿಸ್ಕೌಂಟ್ ಮತ್ತು ಆಕರ್ಷಕ ಉಡುಗೊರೆಗಳನ್ನು ಕೂಡ ಬೈಕ್ ಮತ್ತು ಸ್ಕೂಟಿಯನ್ನು ಕೊಂಡು–ಕೊಳ್ಳುವ ಗ್ರಾಹಕರಿಗೆ ಕೊಡಲಾಗುವುದು. ಕಳೆದ 9 ವರ್ಷಗಳಲ್ಲಿ ವರ್ಷದಿಂದ ವರ್ಷಕ್ಕೆ ನಮ್ಮ ತ್ರಿಭುವನ ಹೋಂಡಾ ಶೋರೂಮ್ ನಲ್ಲಿ ಬೈಕ್ ಮತ್ತು ಸ್ಕೂಟಿಗಳ ಮಾರಾಟ ಹೆಚ್ಚಾಗಿದೆ. ಹಾಗೆ ಗ್ರಾಹಕರ ಸಂಖ್ಯೆಯು ಕೂಡ ಹೆಚ್ಚಾಗುತ್ತಲಿದೆ ಎಂದು ವ್ಯವಸ್ಥಾಪಕ ಅನಿಲಗೌಡ ತಿಳಿಸಿದರು.

## ಕೊಣ್ಣೂರ ಅಂಗನವಾಡಿ ಕೇಂದ್ರಕ್ಕೆ ಅಧಿಕಾರಿಗಳ ಭೇಟಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ನವದೆಹಲಿ ಎ.ಆರ್.ವಿಭಾಗದ ಸಾರ್ವಜನಿಕ ಕುಂದು ಕೊರತೆಗಳ ಅಧಿಕಾರಿ ಶಂಕರಲಾಲ ಹಾಗೂ ಜಲಶಕ್ತಿ ವಿಭಾಗದ ಶ್ರೀಧರ ಅವರು ಬುಧವಾರ ತಾಲೂಕಿನ ಕೊಣ್ಣೂರ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದರು.**

ಈ ಸಂದರ್ಭದಲ್ಲಿ ಅಧಿಕಾ–ರಿಗಳಾದ ಶಂಕರ ಲಾಲ್ ಹಾಗೂ ಶ್ರೀಧರ್ ಅವರು ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಪೂರೈಕೆಯಾಗುವ ಆಹಾರದ ವಸ್ತುಗಳು, ಮಕ್ಕಳಿಗೆ ಅಗತ್ಯವಾಗಿ ಸಿಗಬೇಕಾದ ಗುಣಮಟ್ಟದ ಶಿಕ್ಷಣ ಹಾಗೂ ಕೇಂದ್ರದ ಸ್ವಚ್ಛತೆ,



ಶಿಸ್ತು ಮತ್ತು ಪರಿಸರದ ಕುರಿತು ಪರಿಶೀಲಿಸಿ ಸ್ಥಳದಲ್ಲಿದ್ದ ಇಲಾಖೆಯ ತಾಲೂಕಾಧಿಕಾರಿ ಶಿವಮೂರ್ತಿ ಕುಂಬಾರ ಅವರಿಂದ ಸಮಗ್ರ ಮಾಹಿತಿ ಪಡೆದುಕೊಂಡು, ಅಂಗನವಾಡಿ ಕೇಂದ್ರದ ಉತ್ತಮ ನಿರ್ವಹಣೆಗೆ ಮೆಚ್ಚುಗೆ ವ್ಯಕ್ತಪಡಿಸಿ ಕೆಲವು ಅಗತ್ಯ ಸೂಚನೆಗಳನ್ನೂ ನೀಡಿದರು. ಈ ಸಮಯದಲ್ಲಿ ತಾಲೂಕ ಆರೋಗ್ಯಾಧಿಕಾರಿ ಡಾ.ಸತೀಶ ತಿವಾರಿ,ಸಿಡಿಪಿಓ ಶಿವಮೂರ್ತಿ ಕುಂಬಾರ, ಅಂಗನವಾಡಿ ಕೇಂದ್ರ ಮೇಲ್ವಿಚಾರಕಿ ಸಾವಿತ್ರಿ ಮಂಕ್ಯಾಳ,ಶಿಲಾವತಿ, ಕಾರ್ಯಕರ್ತೆಯರಾದ ಕಾವ್ಯ ಅಂಗಡಗೇರಿ, ಶ್ರೀಮತಿ ಪಾಟೀಲ ಮತ್ತಿತರರು ಇದ್ದರು.

## ಗೊರೇಬಾಳ ಸರ್ಕಾರಿ ಪ್ರೌಢಶಾಲೆಯಲ್ಲಿ ಹ್ಯೂಮನ್ ಪ್ಯಾಪಿಲೋಮ ವೈರಸ್ ಲಸಿಕೆ ಬಗ್ಗೆ ಮಕ್ಕಳಲ್ಲಿ ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಹ್ಯೂಮನ್ ಪ್ಯಾಪಿಲೋಮ ವೈರಸ್ ನಿಂದ ಉಂಟಾಗುವ ಜನನಾಂಗದ ನರಹುಲಿಗಳು ಗುದದ್ವಾರ, ಗಂಟಲು, ತಲೆ, ಕುತ್ತಿಗೆ, ಮತ್ತು ಕ್ಯಾನ್ಸರ್ ಗಳಿಂದ ರಕ್ಷಣೆ ನೀಡುತ್ತದೆ 9ರಿಂದ 45ವರ್ಷ ವಯಸ್ಸಿನ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಈ ಲಸಿಕೆ ಅತ್ಯಂತ ಪರಿಣಾಮಕಾರಿ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಹೇಳಿದರು.**

ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಿಂಧನೂರು, ಪ್ರಾಥ–ಮಿಕ ಆರೋಗ್ಯ ಕೇಂದ್ರ ಧಡೇಸೂಗೂರು ವ್ಯಾಪ್ತಿಯ




ಆಯುಷ್ಮಾನ್ ಆರೋಗ್ಯ ಕೇಂದ್ರ ಗೊರೇಬಾಳ ಸರ್ಕಾರಿ ಪ್ರೌಢಶಾಲೆ ಸಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡು ಮಾತನಾಡಿದರು. ಹೆಣ್ಣು ಮಕ್ಕಳಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವಿಕೆ ಕ್ಯಾನ್ಸರ್ ಪೂರ್ವ ಸ್ಥಿತಿಗಳ ನಿರ್ವಹಣೆ ಕ್ಯಾನ್ಸರ್ ಗೆ ಕಾರಣ ಆಗುವ ಎಚ್.ಪಿ.ವಿ ತಳಿಗಳಿಂದ ಉಂಟಾಗುವ ಕೋಶಗಳ ಬದಲಾವಣೆಯನ್ನು ತಡೆಯುತ್ತದೆ. ಜನನಾಂಗದ ನರಹುಲಿಗಳ ಕ್ಯಾನ್ಸರ ತಡೆಗಟ್ಟುವಿಕೆ ಈ ಲಸಿಕೆಯನ್ನು 9ರಿಂದ 14ವರ್ಷ ವಯಸ್ಸಿನ ಮಕ್ಕಳಿಗೆ ಎರಡು ಡೋಸ್ ಗಳನ್ನು ಶಿಫಾರಸ್ಸು ಮಾಡಲಾಗುತ್ತದೆ. ಲೈಂಗಿಕ ಚಟುವಟಿ–ಕೆ ಪ್ರಾರಂಭದ ಮೊದಲು ಲಸಿಕೆ ಪಡೆಯುವುದು ಉತ್ತಮ 15ರಿಂದ 45ವರ್ಷ ವಯಸ್ಸಿನವರೆಗೂ ಇದು ಪ್ರಯೋಜನ, ಭಾರತದಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಯು ಲಭ್ಯವಿದೆ. ಲಸಿಕೆ ಹಾಕಿದ ಜಾಗದಲ್ಲಿ ನೋವು, ಲಘು ಜ್ವರ ಬರಬಹುದು, ಲಸಿಕೆ ಪಡೆಯುವ ಮೊದಲು ನಿಮ್ಮ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆಯುವುದು ಉತ್ತಮ.

ಎಚ್.ಪಿ.ವಿ ಲಸಿಕೆಯು ಹೊಸದೇನಲ್ಲ ಜಗತ್ತಿನಾದ್ಯಂತ ಈಗಾಗಲೇ 50 ಕೋಟಿ ಲಸಿಕೆಗಳನ್ನು ನೀಡಲಾಗಿದೆ ಕಳೆದ 15 ವರ್ಷಗಳ ಅಂಕಿ ಅಂಶಗಳು ಎಚ್.ಪಿ.ವಿ ಲಸಿಕೆ ಸುರಕ್ಷತಾ ಮತ್ತು ಪರಿಣಾಮಕಾರಿ ಎಂದು ಸಾಬೀತು ಪಡಿಸಿವೆ, ಬೇರೆ ದೇಶಗಳಲ್ಲಿ 10ವರ್ಷದಲ್ಲಿ ಕ್ಯಾನ್ಸರ್ ಪೂರ್ವ ಲಕ್ಷಣಗಳು ಕಡಿಮೆಯಾಗಿದೆ. ನಂತರ ಕುಡಿವ ನೀರಿನ ಶುದ್ಧತೆ ಬಗ್ಗೆ, ವಿಷಪೂ–ರಿತ ಆಹಾರ ಸೇವನೆ ಮಾಡಬಾರದು, ನಿಮ್ಮ ಶ್ವಾಸಕೋಶ ಬೂದಿ ಪಾತ್ರೆಯಲ್ಲ ಧೂಮಪಾನದ ಹವ್ಯಾಸ ಬಿಡಿ ಮುಕ್ತವಾಗಿ ಉಸಿರಾಡಿ, ಆರೋಗ್ಯಕರ ಭವಿಷ್ಯದತ್ತ ಹೆಜ್ಜೆ ಇಡಿ, ಸಮಯಕ್ಕೆ ಸರಿಯಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಎಂದು ಸಾಂಕ್ರಾಮಿಕ ರೋಗಗಳ ಕುರಿತು ತಿಳಿಸಿದರು. ಈ ಕಾರ್ಯಕ್ರಮದಲ್ಲಿ: ಅಂಬಮ್ಮ ಪಿಎಚ್ ಸಿಇಒ, ಚಾಂದ್ ಬಾಷಾ ಸಿ.ಎಚ್ ಓ, ಮುಖ್ಯಗುರು ಶಿವರೆಡ್ಡಿ, ನಿಲೋಫರ್, ಶ್ವೇತಾ, ಪದ್ಮಾ, ಗಂಗಾಧರ, ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ನೇಮಕಾತಿ ಪ್ರಕಟಣೆ

IRCTC ನೇಮಕಾತಿ 2026–2 ಸಹಾಯಕ ವ್ಯವಸ್ಥಾಪಕ/ ವ್ಯವಸ್ಥಾಪಕ/ ಉಪ ಜನರಲ್ ಮ್ಯಾನೇಜರ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ IRCTC ನೇಮಕಾತಿ 2026: 2 ಸಹಾಯಕ ವ್ಯವಸ್ಥಾಪಕ/ ವ್ಯವಸ್ಥಾಪಕ/ ಉಪ ಜನರಲ್ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮವು ಮಾರ್ಚ್ 2026 ರ IRCTC ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ವ್ಯವಸ್ಥಾಪಕ/ ವ್ಯವಸ್ಥಾಪಕ/ ಉಪ ಜನರಲ್ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದೆಹಲಿ – ನವದೆಹಲಿ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಏಪ್ರಿಲ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 11–03–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–ಏಪ್ರಿಲ್–2026 ಅಧಿಕೃತ ವೆಬ್‌ಸೈಟ್: irctc.com

# ಗ್ರಾಮೀಣ ಪ್ರದೇಶದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ವೃದ್ಧಿಗೆ ವಿನೂತನ ಕ್ರಮ

## ಗ್ರಂಥಾಲಯದಲ್ಲಿ ಚಹಾ, ಬಿಸ್ಕೆಟ್ ವ್ಯವಸ್ಥೆಗೆ ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ ಸೂಚನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಎಸ್.ಎಸ್.ಎಲ್.ಸಿ ಸೇರಿದಂತೆ ಬೇರೆ ಬೇರೆ ಪರೀಕ್ಷೆಗಳಿಗೆ ಸಿದ್ದತೆ ಮಾಡಿಕೊಳ್ಳುವ ಜಿಲ್ಲೆಯ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗ ಗ್ರಂಥಾಲಯಗಳಲ್ಲಿ ಸಂಜೆ ವೇಳೆ ಪ್ರತಿ ದಿನ ಚಹಾ ಮತ್ತು ಬಿಸ್ಕೆಟ್ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಸುತ್ತೋಲೆ ಹೊರಡಿಸಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳ ಗ್ರಂಥಪಾಲಕರಿಗೆ ನಿರ್ದೇಶನ ನೀಡಿದ್ದಾರೆ.**

ಇದೇ ತಿಂಗಳು 18 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭವಾಗಲಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯ ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಿ ಮಾಡಿಕೊಳ್ಳಲು ಉತ್ತಮ ಓದುವ



ವಾತಾವರಣದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಕಾರ್ಯನಿರ್ವಹಿಸಬೇಕು. ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಗ್ರಾಮ ಪಂಚಾಯತಿ ಗ್ರಂಥ–ಾಲಯಗಳ ಸಮಯ ಬದಲಾವಣೆ ಹಾಗೂ ಅಭ್ಯಾಸ ಮಾಡಲು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಗ್ರಾಮ ಪಂಚಾಯತಿ ಗ್ರಂಥ–ಾಲಯಗಳ ಕಾರ್ಯ ಸಮಯವನ್ನು ಪ್ರಸ್ತುತ ಇರುವ ಬೆಳಿಗ್ಗೆ 9.00 ರಿಂದ ಸಂಜೆ 6.30 ರವರೆಗೆ ಇರುವ ಸಮಯದ ಹೊರತಾಗಿ, ವಿದ್ಯಾರ್ಥಿಗಳ ಓದುವ ಅವಧಿಯನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಶಾಂತವಾದ ಮತ್ತು ಅನುಕೂಲಕರ ವಾತಾವರಣದಲ್ಲಿ ಓದಲು ಅವಕಾಶ ಕಲ್ಪಿಸುವುದು.

ಗ್ರಾಮ ಪಂಚಾಯತಿಗಳು ವಿಶೇಷ ಕಾಳಜಿ ವಹಿಸಿ ಗ್ರಂಥಾಲಯಗಳಲ್ಲಿ ಸ್ವಚ್ಛತೆ, ಸಮರ್ಪಕ ಬೆಳಕು ಹಾಗೂ ಕುಳಿತುಕೊಳ್ಳುವ ವ್ಯವಸ್ಥೆಗಳನ್ನು ಕಲ್ಪಿಸಿ ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವಂತೆ ನೋಡಿಕೊಳ್ಳಬೇಕು. ಗ್ರಂಥಾಲಯದಲ್ಲಿ ಸಂಜೆಯಿಂದ ರಾತ್ರಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಗ್ರಾಮ ಪಂಚಾಯತಿ ಸ್ವಂತ ಸಂಪನ್ಮೂಲಗಳಿಂದ ಸಂಜೆ ಟೀ ಮತ್ತು ಬಿಸ್ಕೆಟ್ ವ್ಯವಸ್ಥೆ ಮಾಡಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸುತ್ತೋಲೆಯಲ್ಲಿ ಜಿ.ಪಂ ಸಿಇಓ ಅವರು ಸೂಚಿಸಿದ್ದಾರೆ.

## ಶ್ರೀಶೈಲ ಮಲ್ಲಿಕಾರ್ಜುನನ ದರ್ಶನಕ್ಕೆ ಹುರಿ ಬಿಸಿಲು ನೋಡದೇ ಭಕ್ತರ ಪಾದಯಾತ್ರೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಆಂಧ್ರಪ್ರದೇಶದ ನಂದ್ಯಾಲ ಜಿಲ್ಲೆಯ ನಲ್ಲಮಲ ಅರಣ್ಯದಲ್ಲಿರುವ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನಕ್ಕೆ ವಿಜಯಪುರ, ಬಾಗಲಕೋಟೆ, ಯಾದಗಿರಿ ಹಾಗೂ ಕಲಬುರ್ಗಿ ಜಿಲ್ಲೆಗಳ ಭಕ್ತರ ದಂಡು ಹಗಲು ರಾತ್ರಿ ಎನ್ನದೇ ಪಾದಯಾತ್ರೆಯಲ್ಲಿ ಸಾಗುತ್ತಿದೆ.ಬೆಳಗಿನ ಜಾವ ಹಾಗೂ ಮುಸ್ಸಂಜೆ ವೇಳೆಯಲ್ಲಿ ಅಧಿಕ ಪ್ರಮಾಣದಲ್ಲಿ ಭಕ್ತರ ದಂಡು ಕಂಡು ಬರುತ್ತಿದೆ. ಪಾದಯಾತ್ರೆಯಲ್ಲಿ ಮಹಿಳೆಯರು, ಬಾಲಕ, ಬಾಲಕಿಯರೂ ಸಹ ಮಲ್ಲಯ್ಯನ ಸ್ಮರಣೆ ಭಜನೆ ಮಾಡುತ್ತ ಹೊರಟಿದ್ದಾರೆ.**



ಡಾಂಬರ್ ರಸ್ತೆ ಮೇಲೆ ಕಾಲುಗಳು ಸುಡುವುದನ್ನು ರಕ್ಷಿಸಿಕೊಳ್ಳಲು ಕೆಲವು ಯುವಕರು ಹಗುರವಾದ ಮರದ ತುಂಡುಗಳಿಗೆ, ಕೆಲವರು ಬೊಂಬುವಿಗೆ ಕಾಲುಗಳನ್ನು ಕಟ್ಟಿ, ಸಮತೋಲನ ಕಾಯ್ದುಕೊಂಡು ನಡೆಯುತ್ತಿದ್ದಾರೆ. ಕೆಲವರು ತಲೆಯ ಮೇಲೆ ನೀರಿನ ಬಟ್ಟೆ ತೊಯ್ಯಿಸಿಕೊಂಡು ತಲೆಯ ಮೇಲೆ ಹಾಕಿಕೊಂಡು ಮುನ್ನಡೆದಿದ್ದಾರೆ. ಶ್ರೀಶೈಲದಲ್ಲಿ ಹೋಳಿ ಹುಣ್ಣಿಮೆಯಿಂದ ಆರಂಭವಾಗಿ ಯುಗಾದಿಯವರೆಗೆ ನಡೆಯುವ ಜಾತ್ರೆಯಲ್ಲಿ ಪಾಲ್ಗೊಳ್ಳಲು ಹೊರಟಿದ್ದಾರೆ. ಬೃಹತ್ ಜಾತ್ರೆಯು ಶಿವ ಮತ್ತು ಪಾರ್ವತಿಯ (ಭ್ರಮರಾಂಬ) ಭವ್ಯ ಆರಾಧನಾ ಮಹೋತ್ಸವವಾಗಿದೆ. ಶಿವನ 12 ಜ್ಯೋತಿರ್ಲಿಂಗ ಮತ್ತು 18 ಮಹಾಶಕ್ತಿ ಪೀಠಗಳಲ್ಲಿ ಒಂದಾಗಿರುವ ನಂಬಿಕೆ ಇರುವ ಕಾರಣ ಭಕ್ತರ ಸಂಖ್ಯೆ ಅಧಿಕ ಇದೆ. ಜಮಖಂಡಿ ತಾಲ್ಲೂಕಿನ ಕಾಖಂಡಕಿ ಗ್ರಾಮದ ಭಕ್ತರು ಲಿಂಗಸುಗೂರು ತಾಲ್ಲೂಕಿನ ಈಚನಾಳದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ದಾಸೋಹ ಸ್ವೀಕರಿಸಿ ರಾತ್ರಿ ಅಲ್ಲಿಯೇ ವಾಸ್ತವ್ಯ ಮಾಡಿ ಬೆಳಗಿನ ಜಾವ ಪಾದಯಾತ್ರೆ ಮುಂದುವರಿಸಿದ್ದಾರೆ. ಅಲ್ಲಲ್ಲಿ ದಾನಿಗಳಿಂದ ಸೇವೆ: ಶ್ರೀಶೈಲ ಭಕ್ತರಿಗೆ ಮಾರ್ಗ ಮಧ್ಯದಲ್ಲಿ ಅಲ್ಲಲ್ಲಿ ಟೆಂಟ್‌ಗಳನ್ನು ಹಾಕಿ ನೆರಳಿನ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಕೆಲವು ದಾನಿಗಳು ಪಾದಯಾತ್ರಿಗಳಿಗೆ ಬಾಳೆಹಣ್ಣು, ಕಲ್ಲಂಗಡಿ, ಕರಬೂಜ, ಪಪ್ಪಾಯಿ ಹಣ್ಣು, ಸರಬತ್, ಮಜ್ಜಿಗೆ ವ್ಯವಸ್ಥೆ ಮಾಡಿದ್ದಾರೆ. ಪಾದಯಾತ್ರಿಗಳು ಉಪಾಹಾರ ಸೇವಿಸಿ, ಊಟ ಮಾಡಿಕೊಂಡು ಆಯಾಸವಾದಾಗ ಟೆಂಟ್‌ಗಳಲ್ಲಿ ಕೆಲ ಹೊತ್ತು ವಿಶ್ರಾಂತಿ ಪಡೆದು ಮುಂದೆ ಪ್ರಯಾಣ ಬೆಳೆಸುತ್ತಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಬಿಸಿಲು ಇರುವ ಕಾರಣ ಬಹುತೇಕ ಭಕ್ತರು ಬಿಸಿಲಲ್ಲಿ ಹೊರಡಲು ಹಿಂಜರಿಯುತ್ತಿದ್ದಾರೆ. ಕೆಲವರು ರಾತ್ರಿಯಿಡೀ ನಡೆದುಕೊಂಡೇ ಹೋಗುತ್ತಿದ್ದಾರೆ. ನಿತ್ಯ ಕನಿಷ್ಠ 20ರಿಂದ 30 ಕಿ.ಮೀ ನಡೆಯುತ್ತಿದ್ದಾರೆ. ಕಸುವು ಇದ್ದವರು 40 ಕಿ.ಮೀ ವರೆಗೂ ನಡೆಯುತ್ತಿದ್ದಾರೆ ಎಂದು ಪಾದಯಾತ್ರಿಗಳು ಹೇಳುತ್ತಾರೆ. ಉಚಿತ ಆರೋಗ್ಯ ತಪಾಸಣೆ: ನಗರದಲ್ಲಿ ಸೋಮವಾರ ವೀರಶೈವ ರುದ್ರ ಸೇನೆ ನೇತೃತ್ವದಲ್ಲಿ ವೈದ್ಯಕೀಯ ಸಿಬ್ಬಂದಿ ವಿವಿಧ ಜಿಲ್ಲೆಗಳಿಂದ ಶ್ರೀಶೈಲಕ್ಕೆ ಪಾದಯಾತ್ರೆ ಹೊರಟಿರುವ ಭಕ್ತರ ಆರೋಗ್ಯ ತಪಾಸಣೆ ಮಾಡಿದರು. ಸುದೀರ್ಘವಾಗಿ ನಡೆದ ಕಾರಣ ಕಾಲು ಊತುಕೊಂಡವರಿಗೆ ಮುಲಾಮ್ ಹಚ್ಚಿ ಉಪಚರಿಸಿದರು. ಕೆಲವರಿಗೆ ಮಾತ್ರೆಗಳನ್ನು ಕೊಟ್ಟರು. ಅಸ್ಕಿಹಾಳ ಮಡಿವಾಳ ಮಾಚಿದೇವ ಸಂಘದ ವತಿಯಿಂದ ಶ್ರೀಶೈಲ ಪಾದ ಯಾತ್ರೆಗಳಿಗೆ ಹಣ್ಣು ಹಂಪಲು, ಮಜ್ಜಿಗೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಮಡಿವಾಳ ಮಾಚಿದೇವ ಸಂಘದ ಅಧ್ಯಕ್ಷ ಹಂಪಣ್ಣ, ಗೌರವಾಧ್ಯಕ್ಷ ವೆಂಕಟೇಶ ಎಂ. ಮಲ್ಲಿಕಾರ್ಜುನ ಜೆ ಇ., ತಾಯಪ್ಪ, ಮಲ್ಲಿಕಾರ್ಜುನ ಜಿ,, ಖಜಾಂಚಿ ಹುಸೇನಪ್ಪ, ರಾಜಶೇಖರ ಅವರು ಸಹ ಭಕ್ತರಿಗೆ ನೆರವಾಗುತ್ತಿದ್ದಾರೆ. ವೀರಶೈವ ಲಿಂಗಾಯತ ಸಮಾಜ, ವೀರಶೈವ ಮಹಾಸಭಾ ಮತ್ತು ಬಸವ ಕೇಂದ್ರದ ಸಹಯೋಗದಲ್ಲಿ ವೀರಶೈವ ರುದ್ರ ಸೇನೆಯು ಶ್ರೀಶೈಲ ಯಾತ್ರಾರ್ಥಿಗಳಿಗೆ 12 ವರ್ಷಗಳಿಂದ ಉಚಿತ ವೈದ್ಯಕೀಯ ತಪಾಸಣೆ ಶಿಬಿರವನ್ನು ಆಯೋಜಿಸಿಕೊಂಡು ಬಂದಿದೆ ಎಂದು ವೀರಶೈವ ರುದ್ರಸೇನಾ ಅಧ್ಯಕ್ಷ ಶಿವಶರಣ ರೆಡ್ಡಿ ಹೇಳುತ್ತಾರೆ. ’ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾದಯಾತ್ರೆಯಲ್ಲಿ ಶ್ರೀಶೈಲಕ್ಕೆ ತೆರಳುತ್ತಿದ್ದಾರೆ. ಇಂದಿನಿಂದ ಆರು ದಿನಗಳವರೆಗೆ ಭಕ್ತ–ರಿಗೆ ಉಪಾಹಾರ ಸೇವೆ ಮುಂದುವರಿಯಲಿದೆ’ ಎನ್ನುತ್ತಾರೆ. ’ನಿತ್ತ ಒಂದು ಸಾವಿರದಿಂದ ಮೂರು ಸಾವಿರ ಪಾದಯಾತ್ರಿಗಳಿಗೆ ಉಚಿತ ಹಣ್ಣು ಹಂಪಲು ವಿತರಣೆ ಮಾಡುತ್ತಿದ್ದೇವೆ’ ಎಂದು ಮಲ್ಲಿಕಾರ್ಜುನ ಹೇಳುತ್ತಾರೆ.

# ವಚನ ಕಲ್ಯಾಣ 9 ಗಂಟೆಗಳ ನಾಟಕ ಅಹೋರಾತ್ರಿ ರಂಗ ಪ್ರಯೋಗಕ್ಕೆ ಕಲಾವಿದರ ಆಯ್ಕೆಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಚನ ಕಲ್ಯಾಣ ಎಂಬ ಅಹೋರಾತ್ರಿ (ಒಂಬತ್ತು ಗಂಟೆ) ನಾಟಕವನ್ನು ಸಿದ್ಧಪಡಿಸಿ, ನಾಡಿನಾದ್ಯಂತ ಪ್ರದರ್ಶನ ಮಾಡಲು ಇಲಾಖೆ ಉದ್ದೇಶಿಸಿದೆ. ಆ ಸಂಬಂಧ ನುರಿತ ಹಾಗೂ ಆಸಕ್ತ ಯುವಕ ಯುವತಿಯರು ಹಾಗೂ ಅನುಭವಿ ರಂಗಕಲಾವಿದರು/ಗಾಯಕರುಗಳಿಂದ ಅರ್ಜಿಗಳನ್ನು ಅಹ್ವಾನಿಸಿದೆ (ಅರ್ಜಿ ಲಗತ್ತಿಸಿದೆ),**

ವಯೋಮಿತಿ 18 ರಿಂದ 40 ವರ್ಷಗಳು ರಂಗಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಅದ್ಯತೆ ನೀಡಲಾಗುವುದು. ತುಂಬಿದ ಅರ್ಜಿಗಳನ್ನು ದಿನಾಂಕ 20 ಮಾರ್ಚ್ 2026ರ ಒಳಗೆ ಸದಸ್ಯ ಕಾರ್ಯದರ್ಶಿ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056. ಇಲ್ಲಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪುವಂತೆ ಅಥವಾ ಮೇಲ್ ವಿಳಾಸ: kanakaresearchcentre@gmail.com ದ ಮೂಲಕ ಸಲ್ಲಿಸಲು ಕೋರಿದೆ.

ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳ ಕಾಲದ ಅವಧಿಯಲ್ಲಿ ಪೂರ್ಣಕಾಲಿಕವಾಗಿ ತರಬೇತಿ–ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯ. ಮಾಸಿಕ ಗೌರವಧನ ಮತ್ತು ಊಟ–ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. ಅರ್ಜಿಯ ನಮೂನೆಯನ್ನು ಕನ್ನಡ ಸಂಸ್ಕೃತಿ ಇಲಾಖೆಯ ವೆಬ್ ಸೈಟ್ kannadasiri.karnataka.gov.in ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿ ವಿವರಗಳಿಗಾಗಿ ಶ್ರೀ ಸಿ. ಬಸವಲಿಂಗಯ್ಯ (ವಚನ ಕಲ್ಯಾಣ ನಾಟಕದ ನಿರ್ದೇಶಕರು) ಇವರಲ್ಲಿ ಮಾಹಿತಿ ಪಡೆಯಬಹುದು ಮೊಬೈಲ್ ಸಂಪರ್ಕ ಸಂಖ್ಯೆ: 9448538620. ಸಂದರ್ಶನಕ್ಕೆ ಹಾಜರಾಗುವ ಕಲಾವಿದರಿಗೆ ಇಲಾಖೆಯ ಯಾವುದೇ ಭತ್ಯೆ ನೀಡಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

# ಮಾರ್ಚ್ 14ರಂದು ರಾಯಚೂರು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ




ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–2ರ ವ್ಯಾಪ್ತಿಯಲ್ಲಿ ಹಳೆ ವಿದ್ಯುತ್ ಕಂಬಗಳ ಬದಲಾವಣೆ ಕಾಮಗಾರಿ ಕೈಗೊಳ್ಳುತ್ತಿರುವ ಪ್ರಯುಕ್ತ ಮಾರ್ಚ್ 14ರ ಬೆಳಿಗ್ಗೆ 11ರಿಂದ ಸಂಜೆ 4 ರವರಗೆ ನಗರದ ವಿವಿಧ ಕಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.**

ಅಂದು ಬೆಳಿಗ್ಗೆಯಿಂದ ಸಿಟಿ ಟಾಕೀಸ್ ರೋಡ್, ಮಾಂಗಳ್ಯ, ಸಿ.ಎಮ್.ಆರ್ ಶಾಪಿಂಗ್ ಮಾಲ್, ಗಾಂಧಿ ಚೌಕ್, ಮಹಾವೀರ್ ಚೌಕ್, ಮಹಾಳೇಶ್ವರ ವೃತ್ತ, ಕುಂಬಾರ್ ಓನಿ, ಮಕ್ತಲ ಪೇಟೆ, ಮದ್ದಿಪೇಟೆ, ವಡ್ಡೆಪ್ಪ ಜಿನ್ನ, ಸುರಕ್ಷ ಆಸ್ಪತ್ರೆ, ಬ್ರೆಸ್ತವಾರ ಪೇಟೆ (ಪಿಂಜಾರ್ ವಾಡಿ), ಗೋಶಾಲ ರಸ್ತೆ, ಅರಬ್ ಮೊಹಲ್ಲಾ, ಸಿಯಾತಲಾಬ, ಆಟೋ ನಗರ, ಶಿವಂ ಆಸ್ಪತ್ರೆ, ಜಿಲ್ಲಾ ಅಗ್ನಿ ಶಾಮಕ ಕಚೇರಿ, ಜಿಲ್ಲಾ ಪಂಚಾಯತಿ, ಗಂಜ್ ರಸ್ತೆ ಯಿಂದ ಬಸವನ ಬಾವಿ, ಜಿಲ್ಲಾ ಅರಣ್ಯ ಕಚೇ–ರಿಯ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ರಂಭಾಪುರಿ ಪೀಠ ಶಾಖಾ ಮಠದ ಭೂಮಿ ಪೂಜೆ ಕಾರ್ಯಕ್ರಮ ಯಶಸ್ವಿಗೆ ಸಂಪೂರ್ಣ ಸಹಕಾರ: ಅಧ್ಯಕ್ಷ ಹಿರೇಮಠ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಜಗದ್ಗುರುಗಳಾದ ಶ್ರೀ ರಂಭಾಪುರಿ ಪೂಜ್ಯರ ಪೀಠದ ಶಾಖಾ ಮಠವು ವಿಜಯಪುರದಲ್ಲಿ ಸ್ಥಾಪನೆಯಾಗುತ್ತಿರುವುದು ಸಂತೋಷದ ವಿಷಯ,ಮಾರ್ಚ 14 ರಂದು ನಡೆಯಲಿರುವ ಭೂಮಿ ಪೂಜೆ ಕಾರ್ಯಕ್ರಮದ ಯಶಸ್ವಿಗೆ ನಮ್ಮ ಸಂಪೂರ್ಣ ಸಹಕಾರ ಇರಲಿದೆ ಎಂದು ವಿ.ವಿ.ಸಂಘದ ಅಧ್ಯಕ್ಷ, ಸಮಾಜದ ಹಿರಿಯರಾದ ವಿರೂಪಾಕ್ಷಯ್ಯ ಹಿರೇಮಠ ಹೇಳಿದರು. ಗುರುವಾರ ಪಟ್ಟಣದ ಶ್ರೀ ಪಂಚಾಚಾರ್ಯ ಸಹಕಾರಿ ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

ಸಮಾಜದ ಗಣ್ಯರಾದ ಸೋಮಶೇಖರ ಗಣಾಚಾರಿ ಹಾಗೂ ಪ್ರಾಚಾರ್ಯ ಐ.ಬಿ.ಹಿರೇಮಠ ಅವರು



ಮಾತನಾಡಿ ದೇಶದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಪೀಠದ ಸುಮಾರು 12 ಸಾವಿರ ಶಾಖಾ ಮಠಗಳಿವೆ ಆದರೆ ವಿಜಯಪುರ ಜಿಲ್ಲೆಯಲ್ಲಿ ಇಲ್ಲಿವರೆಗೆ ಒಂದೂ ಶಾಖಾ ಮಠ ಇರಲಿಲ್ಲ ಬಹುದಿನಗಳಿಂದ ಇದರ ಬೇಡಿಕೆ ಇತ್ತು ಮಾನ್ಯ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲರು ಆಸಕ್ತಿವಹಿಸಿ ಸ್ಥಳದ ಅವಕಾಶ ಮಾಡಿಕೊಟ್ಟು ಇದರ ಭೂಮಿ ಪೂಜೆಯನ್ನು ಮಾರ್ಚ್ 14 ರಂದು ಶನಿವಾರ ಸಂಜೆ 4:00 ಘಂಟೆಗೆ ವಿಜಯಪುರದ ಸುರಭಿ ಸಿದ್ದೇಶ್ವರ ಲೇಔಟ್ ನವರಸಪುರದಲ್ಲಿ ಹಮ್ಮಿಕೊಂಡಿದ್ದಾರೆ ಸದರಿ ಕಾರ್ಯಕ್ರಮಕ್ಕೆ ಸಮಾಜದ ಬಾಂಧವರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಕೇಳಿಕೊಂಡರು.

ಪ್ರಸ್ತಾವಿಕವಾಗಿ ಶ್ರೀ ಪಂಚಾಚಾರ್ಯ ಸಹಕಾರಿ ಸಂಘದ ಅಧ್ಯಕ್ಷ ಮುತ್ತುರಾಜ್ ಜಹಗೀರದಾರ ಮಾತನಾಡಿ ನಮ್ಮ ಜಿಲ್ಲೆಯಲ್ಲಿಯೇ ಶ್ರೀ ರಂಭಾಪುರಿ ಜಗದ್ಗುರುಗಳ ಪೀಠದ ಶಾಖಾಮಠ ಸ್ಥಾಪನೆಯಾಗುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ ಸದರಿ ಕಾರ್ಯಕ್ರಮದಲ್ಲಿ ಸಮಾಜದ ವತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಶಕ್ತಿಮೀರಿ ಪ್ರಯತ್ನಿಸುತ್ತೇವೆ ಎಂದರು. ಪೂರ್ವಭಾವಿ ಸಭೆಯಲ್ಲಿ ಸಮಾಜದ ಪ್ರಮುಖರಾದ ದಾನಯ್ಯ ಹಿರೇಮಠ,ಈರಯ್ಯ ಹಿರೇಮಠ, ನಾಗಭೂಷಣ ಡೋಣೂರಮಠ, ಶ್ರೀಶೈಲ ಹಿರೇಮಠ, ವೀರೇಶ ಡೋಣೂರಮಠ, ಗಜದಂಡಯ್ಯ ಹಿರೇಮಠ, ಚಂದ್ರಶೇಖರ ಹಿರೇಮಠ, ಬಸವರಾಜ ಮತ್ತಿತರರು ಇದ್ದರು.

# ಜಿಲ್ಲೆಯಲ್ಲಿ ಮೊಟ್ಟ ಮೊದಲ ಸಂಜೀವಿನಿ ಇ–ಮಾರ್ಟ್ ಉದ್ಘಾಟನೆ

## ಗ್ರಾಮೀಣ ಮಹಿಳೆಯರ ಉತ್ಪನ್ನಗಳಿಗೆ ಸಂಜೀವಿನಿ ಇ–ಮಾರ್ಟ್ ಉತ್ತೇಜನ: ತಾ.ಪಂ ಇಓ ಖಾಲೀದ್ ಅಹ್ಮದ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮಹಿಳಾ ಸ್ವ–ಸಹಾಯ ಸಂಘಗಳು ತಯಾರಿಸುವ ವಿವಿಧ ಉತ್ಪನ್ನಗಳನ್ನು ಮಾರುಕಟ್ಟೆಗೆ ತಲುಪಿಸುವ ಉದ್ದೇಶದಿಂದ ಸಂಜೀವಿನಿ ಇ–ಮಾರ್ಟ್ ಆರಂಭಿಸಿದ್ದು, ಗ್ರಾಮೀಣ ಮಹಿಳೆಯರ ಉತ್ಪನ್ನಗಳಿಗೆ ಸಂಜೀವಿನಿ ಇ–ಮಾಟ್ ಉತ್ತೇಜನಕಾರಿ ಎಂದು ಮಾನವಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಖಾಲೀದ್ ಅಹ್ಮದ್ ಅವರು ಹೇಳಿದರು.**

ಮಾರ್ಚ್ 12ರ ಗುರುವಾರ ದಂದು ಜಿಲ್ಲೆಯ ಮಾನವಿ ಪಟ್ಟಣದ ಹಳೇ ತಾಲೂಕು ಪಂಚಾಯಿತಿ ಕಟ್ಟಡದಲ್ಲಿ ಜಿಲ್ಲಾ ಪಂಚಾಯಿತಿ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ತಾಲೂಕು ಪಂಚಾಯಿತಿ ಮಾನವಿ, ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ನೂತನವಾದ ಸಂಜೀವಿನಿ ಇ–ಮಾರ್ಟ್ ಉದ್ಘಾಟಿಸಿ ಅವರು ಮಾತನಾಡಿದರು. ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣವನ್ನು ಗುರಿಯಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ




ಸಂಜೀವಿನಿ ಯೋಜನೆ ಅಡಿಯಲ್ಲಿ ಸಂಜೀವಿನಿ ಇ–ಮಾಟ್ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

ಮಹಿಳಾ ಸ್ವ–ಸಹಾಯ ಸಂಘಗಳು ತಯಾರಿಸುವ ವಿವಿಧ ಉತ್ಪನ್ನಗಳನ್ನು ಮಾರುಕಟ್ಟೆಗೆ ತಲುಪಿಸುವ ಉದ್ದೇಶದಿಂದ ಈ ಯೋಜನೆ ರೂಪುಗೊಂಡಿದ್ದು, ಅದರ ನಿರ್ವಹಣೆಯ ಜವಾಬ್ದಾರಿಯನ್ನು ಶ್ರೀನಿಧಿ ಸಂಜೀವಿನಿ ಮಹಿಳಾ ಸಂಘಕ್ಕೆ ನೀಡಲಾಗಿದೆ ಎಂದರು.

ಸಂಜೀವಿನಿ ಇ–ಮಾರ್ಟ್ ಕೇಂದ್ರ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸಲಿದ್ದು, ಮಹಿಳಾ ಸಂಘದ ಸದಸ್ಯರು ಉತ್ಪನ್ನಗಳ ಸಂಗ್ರಹ, ಗುಣಮಟ್ಟ ಪರಿಶೀಲನೆ, ಪ್ರದರ್ಶನ ಹಾಗೂ ಮಾರಾಟದ ಕಾರ್ಯಗಳನ್ನು ನೋಡಿಕೊಳ್ಳಲಿದ್ದಾರೆ. ಸ್ಥಳೀಯ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವುದರ ಜೊತೆಗೆ ಗ್ರಾಹಕರಿಗೂ ಗುಣಮಟ್ಟದ ವಸ್ತುಗಳು ಲಭ್ಯವಾಗಲಿವೆ. ಇ–ಮಾರ್ಟ್ ವ್ಯವಸ್ಥೆಯ ಮೂಲಕ ಮಹಿಳಾ ಸ್ವ–ಸಹಾಯ ಸಂಘಗಳು ತಮ್ಮ ಉತ್ಪನ್ನಗಳನ್ನು ವ್ಯಾಪಕವಾಗಿ ಪರಿಚಯಿಸಿಕೊಳ್ಳಲು



ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಈ ಹಿಂದೆ ಮಾರುಕಟ್ಟೆ ಸೌಲಭ್ಯಗಳ ಕೊರತೆಯಿಂದ ಅನೇಕ ಉತ್ಪನ್ನಗಳು ಸ್ಥಳೀಯ ಮಟ್ಟದಲ್ಲೇ ಸೀಮಿತವಾಗಿದ್ದವು.

ಈಗ ಈ ಹೊಸ ವ್ಯವಸ್ಥೆಯಿಂದ ಗ್ರಾಮೀಣ ಉತ್ಪನ್ನಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುವ ಸಾಧ್ಯತೆ ಇದೆ. ಗ್ರಾಮೀಣ ಪ್ರದೇಶದಲ್ಲಿನ ಮಹಿಳಾ ಸಂಘದ ಸದಸ್ಯರು ಈ ಹೊಸ ಜವಾಬ್ದಾರಿಯನ್ನು ಉತ್ಸಾಹದಿಂದ ಸ್ವೀಕ–ರಿಸಿದ್ದು, ತಮ್ಮ ಉತ್ಪನ್ನಗಳಿಗೆ ಉತ್ತಮ ಮೌಲ್ಯ ದೊರೆಯುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಈ ಕೇಂದ್ರಗಳು ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಕುಟುಂಬಗಳ ಆರ್ಥಿಕ ಸ್ಥಿತಿಗೂ ಸಹಕಾರಿಯಾಗಲಿದೆ ಎಂದರು.

ಪಂಚಾಯತ್ ರಾಜ್ ಇಲಾಖೆ ಸಹಾಯಕ ನಿರ್ದೇಶಕಿ ದೀಪಾ ಅರಳಿಕಟ್ಟೆ ಅವರು ಮಾತನಾಡಿ, ಸಂಜೀವಿನಿ ಇ–ಮಾರ್ಟ್ ಮೂಲಕ ಮಹಿಳೆಯರ ಉತ್ಪನ್ನಗಳಿಗೆ ಮಾರುಕಟ್ಟೆ ದೊರೆಯುವುದರಿಂದ ಗ್ರಾಮೀಣ ಆರ್ಥಿಕತೆಯೂ ಚೇತರಿಸಿಕೊಳ್ಳಲಿದೆ. ಮಹಿಳಾ ಸಂಘಗಳಿಗೆ ನೀಡಲಾದ ಈ ಜವಾಬ್ದಾರಿ ಅವರ ಸಾಮರ್ಥ್ಯವನ್ನು ತೋರಿಸುವುದರ ಜೊತೆಗೆ ಸಮಾಜದ ಅಭಿವೃದ್ಧಿಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಮ್ಯಾನೇಜರ್ ಬಸವರಾಜ, ಎನ್.ಆರ್.ಎಲ್.ಎಮ್ ವಲಯ ಮೇಲ್ವಿಚಾರಕ ಶರಣು ಬಸವ, ಕೃಷಿಯೇತರ ವ್ಯವಸ್ಥಾಪಕ ಮಹಾಂತೇಶ, ಐ.ಎಫ್.ಸಿ ಸಂಯೋಜಕ ವಿನೋದ್, ಡಿಇಓ ಬಸವರಾಜ, ವೈಪಿ ಕಲ್ಪನಾ, ತಾಲೂಕು ಮಟ್ಟದ ಸಂಪನ್ಮೂಲ ವ್ಯಕ್ತಿ ರುದ್ರಮ್ಮ, ಚನ್ನಬಸಸ್ಸಮ್ಮ, ತಾಲೂಕು ಪಂಚಾಯಿತಿ ಸಿಬ್ಬಂದಿಗಳು, ಒಕ್ಕೂಟದ ಪದಾಧಿಕಾ–ರಿಗಳು, ಶ್ರೀನಿಧಿ ಸ್ವ–ಸಹಾಯ ಸಂಘ ಮಹಿಳೆಯರ ಹಾಗೂ ಒಕ್ಕೂಟದ ಸಿಬ್ಬಂದಿಗಳು ಹಾಜರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಜವಳಿ ಎಂಜಿನಿಯರಿಂಗ್

ಜವಳಿ ಎಂಜಿನಿಯರಿಂಗ್ ಒಂದು ಎಂಜಿನಿಯರಿಂಗ್ ವಿಶೇಷತೆಯಾಗಿದೆ. ಇದು ವಿವಿಧ ರೀತಿಯ ಬಟ್ಟೆಗಳ ವಿನ್ಯಾಸ, ಉತ್ಪಾದನೆ, ಸಂಸ್ಕರಣೆ ಮತ್ತು ಉತ್ಪಾದನೆಗೆ ಸಂಬಂಧಿಸಿದೆ. ಈ ಕೋರ್ಸ್‌ಗಳ ಗಮನವು ವಿಶಿಷ್ಟ ಮತ್ತು ಸೃಜನಶೀಲ ಉಡುಪು, ಬಟ್ಟೆಗಳು, ನೂಲುಗಳು, ನಾರುಗಳು, ಹತ್ತಿ, ನಾರುಗಳು, ಬಟ್ಟೆ ವಸ್ತುಗಳಲ್ಲಿ ಬಳಸುವ ನೂಲುಗಳ ರಚನೆಯ ಮೇಲೆ. ಡಿಪ್ಲೊಮಾ, ಪ್ರಮಾಣಪತ್ರ, ಯುಜಿ, ಪಿಜಿ ಮತ್ತು ಡಾಕ್ಟರೇಟ್ ಸೇರಿದಂತೆ ವಿವಿಧ ಶೈಕ್ಷಣಿಕ ಹಂತಗಳಲ್ಲಿ ಜವಳಿ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ನೀಡಲಾಗುತ್ತದೆ. ಜವಳಿ ಎಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಮತ್ತು ಎಂ.ಟೆಕ್. ಈ ಕ್ಷೇತ್ರದಲ್ಲಿ ಅತ್ಯಂತ ಬೇಡಿಕೆಯ ಕೋರ್ಸ್‌ಗಳಾಗಿವೆ. ಜವಳಿ ಎಂಜಿನಿಯರಿಂಗ್ ಕೋರ್ಸ್‌ಗೆ ಅರ್ಹತೆ ಪಡೆಯಲು, ಮಾನ್ಯತೆ ಪಡೆದ ಮಂಡಳಿಯಿಂದ ಕನಿಷ್ಠ 50–60% ಒಟ್ಟು ಅಂಕಗಳೊಂದಿಗೆ 12 ನೇ ತರಗತಿಯಲ್ಲಿ ಉತ್ತೀರ್ಣರಾಗುವುದು ಅತ್ಯಂತ ಮೂಲಭೂತ ಅವಶ್ಯಕತೆಯಾಗಿದೆ. ಜವಳಿ ಎಂಜಿನಿಯರಿಂಗ್‌ನಲ್ಲಿ ಕೋರ್ಸ್ ನೀಡುವ ಕೆಲವು ಜನಪ್ರಿಯ ಕಾಲೇಜುಗಳಲ್ಲಿ ಐಐಟಿ ದೆಹಲಿ, ಅನ್ನಾ ವಿಶ್ವವಿದ್ಯಾಲಯ, ಐಸಿಟಿ ಮುಂಬೈ, ಎನ್‌ಐಟಿ ಜಲಂಧರ್, ಪಿಎಸ್‌ಜಿಸಿಟಿ ಕೊಯಮತ್ತೂರು ಮತ್ತು ಇನ್ನೂ ಹೆಚ್ಚಿನವು ಸೇರಿವೆ. ಮೆರಿಟ್ ಆಧಾರಿತ ಪ್ರವೇಶದ ಜೊತೆಗೆ, ಕೆಲವು ಉನ್ನತ ಕಾಲೇಜುಗಳು ವಿವಿಧ ಹಂತಗಳಲ್ಲಿ ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಜೆಇಇ ಮುಖ್ಯ, ಟಿಎನ್‌ಇಎ ಕೌನ್ಸೆಲಿಂಗ್ ಮತ್ತು ಗೇಟ್‌ನಂತಹ ಪರೀಕ್ಷೆಗಳ ಪ್ರವೇಶ ಅಂಕಗಳನ್ನು ಬಯಸುತ್ತವೆ.ಟೆಕ್ಸ್‌ಟೈಲ್ ಎಂಜಿನಿಯ–ರಿಂಗ್ (ಜವಳಿ ತಂತ್ರಜ್ಞಾನ) ಫೈಬರ್, ನೂಲು ಮತ್ತು ಬಟ್ಟೆಯ ಉತ್ಪಾದನೆ, ಸಂಸ್ಕರಣೆ ಮತ್ತು ವಿನ್ಯಾಸದ ಮೇಲೆ ಕೇಂದ್ರೀಕ–ರಿಸುವ 4 ವರ್ಷಗಳ ಬಿ.ಟೆಕ್ (B.Tech) ಕೋರ್ಸ್ ಆಗಿದೆ. ಇದು ರಾಸಾಯನಿಕ, ಭೌತಿಕ ಮತ್ತು ಯಾಂತ್ರಿಕ ತತ್ವಗಳನ್ನು ಬಳಸಿ ಜವಳಿ ಉದ್ಯಮದಲ್ಲಿ ನಾವೀನ್ಯತೆಗಳನ್ನು ತರುತ್ತದೆ. 10+2 (PCM) ಉತ್ತೀರ್ಣರಾದವರು ಈ ಕೋರ್ಸ್‌ಗೆ ಸೇರಬಹುದು ಟೆಕ್ಸ್‌ಟೈಲ್ ಎಂಜಿನಿಯರಿಂಗ್ ಕೋರ್ಸ್ ವಿವರಗಳು: ಕೋರ್ಸ್ ಅವಧಿ: 4 ವರ್ಷಗಳು (B.Tech/ B.E.). ಅರ್ಹತೆ: ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತದೊಂದಿಗೆ (PCM) 12ನೇ ತರಗತಿಯಲ್ಲಿ ಕನಿಷ್ಠ 50–60% ಅಂಕಗಳು. ಪ್ರವೇಶ ಪರೀಕ್ಷೆಗಳು: KCET, JEE Main, COMEDK. ಮುಖ್ಯ ವಿಷಯಗಳು: ಫೈಬರ್ ಸೈನ್ಸ್, ಯಾರ್ನ್ ಮ್ಯಾನುಫ್ಯಾಕ್ಚರಿಂಗ್, ಫ್ಯಾಬ್ರಿಕ್ ಮ್ಯಾನುಫ್ಯಾಕ್ಚರಿಂಗ್, ಟೆಕ್ಸ್‌ಟೈಲ್ ಕೆಮಿಕಲ್ ಪ್ರೊಸೆಸಿಂಗ್, ಮತ್ತು ಅಪ್ಯಾರಲ್ ಪ್ರೊಡಕ್ಷನ್. ಉದ್ಯೋಗಾವಕಾಶಗಳು: ಟೆಕ್ಸ್‌ಟೈಲ್ ಎಂಜಿನಿಯರ್, ಪ್ರೊಸೆಸ್ ಇಂಜಿನಿಯರ್, ಕ್ವಾಲಿಟಿ ಕಂಟ್ರೋಲ್ ಮ್ಯಾನೇಜರ್, ಫ್ಯಾಷನ್ ಡಿಸೈನರ್, ಮತ್ತು ಪ್ರೊಡಕ್ಷನ್ ಮ್ಯಾನೇಜರ್.

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಅನುಷ್ಠಾನಾಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿಗಳು

# ಎಸ್‌ಸಿಪಿ, ಟಿಎಸ್‌ಪಿ ಅನುದಾನ ಲ್ಯಾಪ್ಸ್ ಆದಲ್ಲಿ ಶಿಸ್ತು ಕ್ರಮ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಎಸ್‌ಸಿ–ಎಸ್‌ಪಿ ಹಾಗೂ ಟಿಎಸ್‌ಪಿ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಅನುದಾನವು ಕಾಲಮಿತಿಯೊಳಗೆ ಬಳಕೆಯಾಗಬೇಕು. ಅಧಿಕಾರಿಗಳು ಬೇಜವಾಬ್ದಾರಿ ವಹಿಸಿದ ಕಾರಣಕ್ಕೆ ಅನುದಾನವು ಬಳಕೆಯಾಗದೇ ಲ್ಯಾಪ್ಸ್ ಆದಲ್ಲಿ ಅಂತಹ ಅಧಿಕಾರಿಗಳ ಮೇಲೆ ಶಿಸ್ತು ಕ್ರಮಕ್ಕೆ ಮುಲಾಜಿಲ್ಲದೇ ಕ್ರಮ ವಹಿಸುವುದಾಗಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಎಚ್ಚರಿಕೆ ನೀಡಿದರು.**

ಮಾರ್ಚ್ 12ರಂದು ಗುರುವಾರ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ 2025–26ನೇ ಸಾಲಿನ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಮುದಾಯದವರ ಏಳ್ಗೆಗಾಗಿ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಅನುದಾನವು ಆಯಾ ಸಮುದಾಯದವ–ರಿಗೆ ನ್ಯಾಯಯುತವಾಗಿ ತಲುಪಬೇಕು.

ನಿಗದಿಪಡಿಸಿದ ಗುರಿಯನುಸಾರ ಬಿಡುಗಡೆಯಾದ ಅನುದಾನವು ಸಕಾಲಕ್ಕೆ ಅರ್ಹ ಫಲಾನುಭವಿಗಳಿಗೆ ತಲುಪಬೇಕು. 2025–26 ಸಾಲಿನಲ್ಲಿ ಬಿಡುಗಡೆಯಾದ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಬೇಕು. ಕಾರ್ಯಕ್ರಮ ನೀಡಿ ಅನುದಾನ ಬಿಡುಗಡೆ ಮಾಡಿದಾಗ್ಯೂ ಅನುದಾನ ಬಳಸದೇ ಇರುವುದು ತಪ್ಪಾಗುತ್ತದೆ. ಇಲಾಖಾವಾರು ಪರಿಶೀಲನೆ ವೇಳೆ ಯಾವುದೇ ಇಲಾಖೆಯ ಅಧಿಕಾರಿಗಳು ಅನುದಾನ ಬಳಸದೇ ತಪ್ಪು ಎಸಗಿರುವುದು ಕಂಡು ಬಂದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಅಧಿನಿಯಮದಡಿ ಅಮಾನತು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಜೊತೆಗೆ ಎಸ್ಸಿಪಿ ಮತ್ತು ಟಿಎಸ್ಪಿ ಕಾರ್ಯಕ್ರಮಗಳ ಭೌತಿಕ ಹಾಗೂ ಆರ್ಥಿಕ ಗುರಿ ಸಾಧನೆಗೆ ಪ್ರಥಮಾದ್ಯತೆ ನೀಡಬೇಕು. ಆಯಾ ಇಲಾಖೆಗಳ ಅನುಷ್ಠಾನಾಧಿಕಾ–ರಿಗಳು ಈ ಬಗ್ಗೆ ವಿಶೇಷ ಮುತುವರ್ಜಿ ವಹಿಸಬೇಕು. ಬಿಡುಗಡೆಯಾದ ಅನುದಾನ ಮರಳಿ ಹೋಗದಂತೆ ನೋಡಿಕೊಳ್ಳಬೇಕು. ಬಾಕಿ ಉಳಿಸಿದ ಅನುದಾನಕ್ಕೆ ನಿಯಮಾನುಸಾರ ಬಿಲ್ಲುಗಳನ್ನು ಕಾಲಮಿತಿಯೊಳಗೆ ಸಿದ್ಧಪಡಿಸಿ, ನಿಗದಿಪಡಿಸಿದ ಅವಧಿಯೊಳಗೆ ಖಜಾನೆಗೆ ಸಲ್ಲಿಸಬೇಕು. ಈ ಸಂಬಂಧ ಏನಾದರು ತಾಂತ್ರಿಕ ಕಾರಣಗಳು ಎದುರಾದಲ್ಲಿ ಜಿಲ್ಲಾಡಳಿತ ಅಥವಾ ಜಿಲ್ಲಾ ಪಂಚಾಯತ್ ಸಿಇಓ ಅವರ ಗಮನಕ್ಕೆ ತರಬೇಕು ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.



3 ತಿಂಗಳ ಗಡುವು: ಇಲಾಖಾವಾರು ಪರಿಶೀಲನೆ ವೇಳೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯ ಬಗ್ಗೆ ಜಿಲ್ಲಾಧಿಕಾರಿಗಳು ಕೇಳಿದರು.

ಕೈಮಗ್ಗ ಮತ್ತು ಜವಳಿ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಜಿಲ್ಲೆಯ ಜನರಲ್ಲಿ ಜನಜಾಗೃತಿ ಮೂಡಿಸಿದ್ದೀರಾ? ಅನುದಾನ ಪಡೆದುಕೊಂಡು ಬಳಸಲು ಯಾಕೆ ಕ್ರಮ ವಹಿಸಿಲ್ಲ ಎಂದು ಜಿಲ್ಲಾಧಿಕಾರಿಗಳು ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧಿಕಾ–ರಿಗೆ ಪ್ರಶ್ನಿಸಿದರು. ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಬೆಳೆಯುತ್ತಾರೆ. ಹತ್ತಿ ಬೆಳೆಗಾರರಿಗೆ ಇಲಾಖೆಯಿಂದ ಅನುಕೂಲವಾಗದಿದ್ದರೆ ಏನು ಪ್ರಯೋಜನ? ಎಂದು ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾಧಿಕಾ–ರಿಗಳು, ಅಧಿಕಾರಿಗೆ ಶೋಕಾಸ್ ನೋಟೀಸ್ ಜಾರಿ ಮಾಡಲು ನಿರ್ದೇಶನ ನೀಡಿದರು.

ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯನ್ನು ತೋರಿಸಲು 3 ತಿಂಗಳ ಕಾಲಾವಕಾಶ ನೀಡಿದರು. ಕೈಮಗ್ಗ ಮತ್ತು ಜವಳಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ವಿಶೇಷ ಸಭೆಗೆ ಸಿದ್ಧತೆಗೆ ಸಮನ್ವಯ ಮಾಡಲು ಇದೆ ವೇಳೆ ಜಿಲ್ಲಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗೆ ಸೂಚನೆ ನೀಡಿದರು.

ನೋಟೀಸ್ ಜಾರಿಗೆ ಸೂಚನೆ: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಆದಿಜಾಂಬವ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು, ಬಿಡುಗಡೆಯಾದ ಅನುದಾನ ಬಳಕೆಯ ಬಗ್ಗೆ ಸಭೆಯಲ್ಲಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು,

ಭೂ ಒಡೆತನ ಸೇರಿದಂತೆ ಬೇರೆ ಬೇರೆ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ವಿಳಂಬ ಮಾಡಿದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲು ನಿರ್ದೇಶನ ನೀಡಿದರು.

ಕ್ರಿಯಾಯೋಜನೆ ಸಿದ್ಧಪಡಿಸಿ: ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿದ್ದಾರೆ. ಹಾಗಾಗಿ ರಾಜ್ಯದಲ್ಲೇ ಅತಿ ಹೆಚ್ಚು ಅನುದಾನ ಎಸ್ಸಿಪಿ ಮತ್ತು ಟಿಎಸ್ಪಿ ಯೋಜನೆಯಡಿ ರಾಯಚೂರು ಜಿಲ್ಲೆಗೆ ನಿಗದಿಯಾಗಬೇಕು. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಿ ಮುಂದಿನ 2026–27ನೇ ಸಾಲಿನ ಕ್ರಿಯಾಯೋಜನೆಯನ್ನು ಈಗಲೇ ಸಿದ್ಧಪಡಿಸಬೇಕು. ಏಪ್ರೀಲ್ ಅಂತ್ಯದೊಳಗೆ ಕ್ರಿಯಾಯೋಜನೆ ಸಿದ್ಧಪಡಿಸಿದಲ್ಲಿ ಹೆಚ್ಚಿನ ಅನುದಾನ ರಾಯಚೂರು ಜಿಲ್ಲೆಗೆ ನಿಗದಿಯಾಗಲಿದೆ ಎಂದು ಜಿಲ್ಲಾಧಿಕಾ–ರಿಗಳು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಈ ವೇಳೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಮಾತನಾಡಿ, ಜಿಲ್ಲೆಯ ಆಯಾ ಇಲಾಖೆಗಳ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಗಳ ಅನುಷ್ಠಾನಾಧಿಕಾರಿಗಳು ಜಾಗೃತಿ ವಹಿಸಿ ಕಾರ್ಯನಿರ್ವಹಿಸಬೇಕು. ಎಸ್‌ಸಿಪಿ ಮತ್ತು ಟಿಎಸ್‌ಪಿ ಕಾರ್ಯಕ್ರಮಗಳನ್ನು ಹಗುರವಾಗಿ ಪರಿಗಣಿಸಬಾರದು. ಬಿಡುಗಡೆಯಾದ ಅನುದಾನಕ್ಕೆ ಪ್ರತಿಶತ 100ರಷ್ಟು ಸಾಧನೆ ಮಾಡಲೇಬೇಕು. ಎಲ್ಲ ಅನುದಾನವನ್ನು ಬಳಸಬೇಕು. ಕೆಲವು ಇಲಾಖೆಗಳ ಅಧಿಕಾ–ರಿಗಳು ಅನುದಾನ ಬಳಕೆಗೆ ಗಮನ ಹರಿಸುತ್ತಿಲ್ಲ.

ಅನುದಾನ ಬಳಕೆ ಮಾಡದೇ ನಿರ್ಲಕ್ಷ್ಯ ವಹಿಸಿದಲ್ಲಿ ಹೊಸ ಕಾಯ್ದೆ ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲಾಗುತ್ತದೆ ಎಂಬುದರ ಬಗ್ಗೆ ಅರಿವು ಹೊಂದಿ ಯೋಜನೆಗಳ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ್ ಚೌವ್ಹಾಣ್, ರಿಮ್ಸ್ ಸಂಸ್ಥೆಯ ನಿರ್ದೇಶಕ ಡಾ.ರಮೇಶ ಬಿ.ಹೆಚ್., ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ನವೀನ್ ಕುಮಾರ್, ಪಶು ಸಂಗೋಪನೆ ಇಲಾಖೆಯ ಆಡಳಿತಾಧಿಕಾರಿ ಬಿ.ವೈ.ವಾಲ್ಮೀಕಿ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಮಾನಪ್ಪ, ಯುವಜನ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವೀರೇಶ ನಾಯಕ, ಆದಿಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜೇಂದ್ರ ಜಲ್ದಾರ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಮಹಮ್ಮದ್ ಅಲಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ ಇದ್ದರು.

## ರಾಯಚೂರು–ಗುಂತಕಲ್ ರೈಲ್ವೆ ಮಾರ್ಗ ಮೇಲ್ದರ್ಜೆಗೆ 260 ಕೋಟಿ ರೂ. ಅನುದಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಗುಂತಕಲ್ ಮಾರ್ಗವೂ ಸೇರಿ, ದೇಶದ ಪ್ರಮುಖ ರೈಲ್ವೆ ಕಾರಿಡಾರ್‌ಗಳಲ್ಲಿ ಟ್ರ್ಯಾಕ್ಷನ್ ಮತ್ತು ಡಿಜಿಟಲ್ ಸಂವಹನ ಸುಧಾರಣೆಗೆ ಭಾರತೀಯ ರೈಲ್ವೆಯು 765 ಕೋಟಿ ರೂ.ಗೂ ಅಧಿಕ ಅನುದಾನವನ್ನು ಅನುಮೋದಿಸಿದೆ.126 ಕಿ.ಮೀ. ಉದ್ದದ ರಾಯಚೂರು–ಗುಂತಕಲ್ ಮಾರ್ಗದಲ್ಲಿನ ಎಲೆಕ್ಟ್ರಿಕ್ ಟ್ರ್ಯಾಕ್ಷನ್ ವ್ಯವಸ್ಥೆಯನ್ನು ಈಗಿರುವ 125 ಕೆ.ವಿ. ವ್ಯವಸ್ಥೆಯನ್ನು 225 ಕೆ.ವಿ.ಗೆ ಬದಲಾಯಿಸಲಾಗುತ್ತದೆ.**



ಇದಕ್ಕಾಗಿ 259.39 ಕೋಟಿ ರೂ. ಮಂಜೂರಾಗಿದ್ದು ವಂದೇ ಭಾರತ್ ರೈಲುಗಳ ಸೇವೆ ಪ್ರಾರಂಭಿಸುವುದು ಸೇರಿ ವೇಗದ ಪ್ರಯಾಣಿಕ ಸೇವೆ ಮತ್ತು ಸುಗಮ ಸರಕು ಸಾಗಣೆಗೆ ಈ ಬದಲಾವಣೆಯಿಂದ ಅನುಕೂಲವಾಗಲಿದೆ. ಇದೇ ವೇಳೆ ದುವ್ವಾಡ–ವಿಶಾಖಪಟ್ಟಣ–ವಿಜಿಯನಗರಂ ಸರಕು ಸಾಗಣೆ ಕಾರಿಡಾರ್‌ನ ಟ್ರ್ಯಾಕ್ಷನ್ ವ್ಯವಸ್ಥೆ ಆಧುನೀಕರಣಕ್ಕೆ 318.07 ಕೋಟಿ ರೂ. ಮತ್ತು ವಡೋದರಾ ಮತ್ತು ಮುಂಬೈ ವಿಭಾಗಗಳಲ್ಲಿ 1,000 ಕಿ.ಮೀ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಸಲು 187.88 ರೂ. ಮಂಜೂರು ಮಾಡಲಾಗಿದೆ.

# ನಿಡಶೇಸಿ ಕೆರೆ ಉದ್ಯಾನ ರಕ್ಷಣೆಯಲ್ಲಿ ಸಾಮಾಜಿಕ ಸೇವೆ



ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ನಿರ್ವಹಣೆ ಇಲ್ಲದೆ ಸೊರಗಿ ಹಾಳು ಬಿದ್ದಿರುವ ಇಲ್ಲಿಗೆ ಸಮೀಪದ ನಿಡಶೇಸಿ ಕೆರೆ ತಟದಲ್ಲಿರುವ ಸಾರ್ವಜನಿಕ ಉದ್ಯಾನ ಪುನಶ್ಚೇತನಕ್ಕೆ ಪಟ್ಟಣದ ಸಮಾನ ಮನಸ್ಕ ಪರಿಸರ ಪ್ರೇಮಿಗಳ ತಂಡ ಆಸಕ್ತಿ ವಹಿಸಿದೆ. ಪಟ್ಟಣದಲ್ಲಿ ಉದ್ಯಾನ ರಕ್ಷಣೆ ಸೇರಿದಂತೆ ಇಂಥ ಸಾಮಾಜಿಕ ಸೇವಾ ಕಾರ್ಯದಲ್ಲಿ ಸ್ವಯಂಪ್ರೇರಣೆಯಿಂದ ಗುರುತಿಸಿಕೊಂಡಿರುವ ಪರಿಸರಪ್ರಿಯರು ಹಸಿರು ಸೌಂದರ್ಯ ಹೆಚ್ಚಿಸುವ ನಿಟ್ಟಿನಲ್ಲಿ ಸಸಿಗಳ ನಾಟಿ, ಗಿಡಮರಗಳ ಸಂರಕ್ಷಣೆಗೆ ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸಿ ಸಾರ್ವಜನಿಕರಿಂದ ಸೈ ಎನಿಸಿಕೊಂಡಿದ್ದಾರೆ.**

ಈಗ ನಿರ್ಲಕ್ಷಿತ ನಿಡಶೇಸಿ ಕೆರೆ ಉದ್ಯಾನದತ್ತ ಗಮನಹರಿಸಿದ್ದು ಆರಂಭಿಕ ಹಂತದಲ್ಲಿ ಸ್ವಚ್ಛತೆ ಕೆಲಸ ಆರಂಭಿಸಿದ್ದಾರೆ. ಬುಧವಾರ ಆರಂಭಗೊಂಡಿರುವ ಉದ್ಯಾನ ಸ್ವಚ್ಛತೆ ಅಭಿಯಾನ ನಾಲ್ಕು ದಿನಗಳವರೆಗೆ ಮುಂದುವರೆಯಲಿದೆ ಎಂದು ತಿಳಿಸಲಾಗಿದೆ. ಅಮರೇಗೌಡ ಬಯ್ಯಾಪುರ ಶಾಸಕರಾಗಿದ್ದ ಅವಧಿಯಲ್ಲಿ ಅವರ ಮುತುವರ್ಜಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಂದಾಜು 2 ಕೋಟಿ ಅನುದಾನದಲ್ಲಿ ಈ ಉದ್ಯಾನವನ್ನು ಕೆಆರ್‌ಡಿ–ಎಲ್ ನಿರ್ಮಾಣ ಸಂಸ್ಥೆ ಅಭಿವೃದ್ಧಿಪಡಿಸಿತ್ತು. ನಂತರ ಉದ್ಯಾನದ ಪ್ರದೇಶ ಕೊರಡಕೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವುದ–ರಿಂದ ಉದ್ಯಾನ ನಿರ್ವಹಣೆ ಜವಾಬ್ದಾ–ರಿಯನ್ನು ಪಂಚಾಯಿತಿಗೆ ಹಸ್ತಾಂತರಿಸಲಾಗಿತ್ತು.

ಆದರೆ ಎರಡು ಮೂರು ವರ್ಷಗಳಿಂದಲೂ ಪಂಚಾಯಿತಿ ಉದ್ಯಾನದ ರಕ್ಷಣೆ ಇರಲಿ ಇದ್ದುದನ್ನು ಉಳಿಸಿಕೊಳ್ಳುವಲ್ಲಿಯೂ ನಿರ್ಲಕ್ಷ್ಯವಹಿಸಿದ್ದ–ರಿಂದ ಉದ್ಯಾನ ಹಾಳು ಬಿದ್ದಿತ್ತು. ಪುಂಡಪೋಕರಿಗಳ ತಾಣವಾಗಿ ಅನೈತಿ–ಕ ಚಟುವಟಿಕೆಗಳಿಗೆ ಪ್ರಶಸ್ತ ಸ್ಥಳವೂ ಆಗಿದೆ. ಕಣ್ಮನ ಸೆಳೆಯುತ್ತಿದ್ದ ಅಲ್ಲಿನ ಕಲಾಕೃತಿಗಳೆಲ್ಲ ಕಿಡಿಗೇಡಿಗಳ ಕೈಚಳಕದಿಂದ ವಿರೂಪಗೊಂಡಿರುವುದು ದುರಂತದ ಸಂಗತಿ ಎಂದೆ ಪರಿಸರ ಪ್ರಿಯರು ಬೇಸರ ಹೊರಹಾಕಿದ್ದರು. ಈ ಕುರಿತು ನಿರ್ವಹಣೆ ಜವಾಬ್ದಾರಿಯನ್ನು ಪಂಚಾಯಿತಿಯಿಂದ ಕುಷ್ಟಗಿ ಪುರಸಭೆಗೆ ವಹಿಸುವಂತೆ ಒತ್ತಡಗಳು ಇದ್ದರೂ ಅದರ ಬಗ್ಗೆ ಜಿಲ್ಲಾಡಳಿತ ಗಮನಹ–ರಿಸಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿದೆ.

ಉದ್ಯಾನವನ್ನು ಮತ್ತೆ ಪುನಶ್ಚೇತನಗೊಳಿಸಿ ಮೊದಲಿನಂತೆ ಜನರ, ವಿದ್ಯಾರ್ಥಿಗಳ ಆಕರ್ಷಣೀಯ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿರುವ ಗೆಳೆಯರ ಬಳಗ ಶ್ರಮದಾನ ನಡೆಸುತ್ತಿದೆ. ನೌಕರರು, ನಿವೃತ್ತರು, ವಿವಿಧ ಸಂಘಟನೆಗಳ ಪ್ರಮುಖರು, ಸಾರ್ವಜನಿಕರು ಸೇರಿದಂತೆ ಅನೇಕ ಪ್ರಮುಖರೂ ಸಹ ಶ್ರಮದಾನದಲ್ಲಿ ಭಾಗಿಯಾಗಿದ್ದು ಬೆಳಿಗ್ಗೆ ಸಲಿಕೆ, ಬುಟ್ಟಿ, ಪೊರಕೆಗಳೊಂದಿಗೆ ಉದ್ಯಾನದ ಸ್ವಚ್ಛತೆಗೆ ಇಳಿದಿದ್ದು ಬುಧವಾರ ಕಂಡುಬಂದಿತು. ಅಲ್ಲದೆ ಅದಕ್ಕೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶೇಖದಾದೂ ಮತ್ತು ಕಸ ವಿಲೇವಾರಿ ವಾಹನದೊಂದಿಗೆ ಪಂಚಾಯಿತಿ ಇತರೆ ಸಿಬ್ಬಂದಿಯೂ ಕೈಜೋಡಿಸಿದ್ದರು.

ಪರಿಸರಪ್ರಿಯ ಬಳಗದ ಗೆಳೆಯರಾದ ಮಹಾಂತಯ್ಯ ಅರಳೆಲೆಮಠ, ವೀರೇಶ ಬಂಗಾರಶೆಟ್ಟರ, ಭರತೇಶ ಜೋಷಿ, ಕೃಷ್ಣ ಕಂದಕೂರು, ಪಾಂಡುರಂಗ ಆಶ್ರೀತ್, ಶೇಖರಯ್ಯ ಸರಗಣಾಚಾರ, ವೀರಣ್ಣ ಹೊಕ್ರಾಣಿ, ನಾಗಪ್ಪ ಹೊಸವಕ್ಕಲ, ಮಹಾಂತೇಶ ಮಂಗಳೂರು, ಮಂಜುನಾಥ ಮಹಾಲಿಂಗಪೂರ, ಬಾಬು ಘೋರ್ಪಡೆ, ರಾಜೇಶ್ ಪತ್ತಾರ ಸೇರಿದಂತೆ ಇತರರು ಶ್ರಮದಾನದಲ್ಲಿ ತೊಡಗಿದ್ದು ಈ ಕೆಲಸಕ್ಕೆ ಇತರರೂ ಭಾಗವಹಿಸುವ ಆಸಕ್ತಿ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.


– ವೀರೇಶ ಬಂಗಾರಶೆಟ್ಟರ, ಗೆಳೆಯರ ಬಳಗದ ಸದಸ್ಯಸಾರ್ವಜನಿಕರ ಸಹಕಾರದೊಂದಿಗೆ ನಿಡಶೇಸಿ ಕೆರೆ ಪುನಶ್ಚೇತನಗೊಂಡಿತ್ತು ಅಲ್ಲಿಯೇ ಇರುವ ಉದ್ಯಾನ ಆಕರ್ಷಣೀಯ ತಾಣವಾಗಿದ್ದರೂ ಹಾಳಾಗಿರುವುದು ಬೇಸರ ತಂದಿದೆ. ಸಾಧ್ಯವಾದಷ್ಟು ಸುಧಾರಣೆ ತರಲು ಪರಿಸರ ಪ್ರಿಯರು ಮುಂದಾಗಿದ್ದೇವೆ.

# ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕರ್ನಾಟಕ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಸೈನ್ಸ್ ಎಜುಕೇಶನ್ ಬೋರ್ಡ್ ವತಿಯಿಂದ ಇತ್ತೀಚೆಗೆ ನಡೆಸಲಾದ ಡಿಪ್ಲೋಮಾ ಇನ್ ನರ್ಸಿಂಗ್ (GNM) ಪರೀಕ್ಷೆಯಲ್ಲಿ ಸಿಂಧನೂರಿನ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.**

ವಿದ್ಯಾರ್ಥಿಗಳ ಪರಿಶ್ರಮ, ಉಪನ್ಯಾಸಕರ ಸಮರ್ಪಿತ ಮಾರ್ಗದರ್ಶನ ಹಾಗೂ ಸಂಸ್ಥೆಯ ಗುಣಮಟ್ಟದ ಶಿಕ್ಷಣದ ಫಲವಾಗಿ ಈ ಉತ್ತಮ ಫಲಿತಾಂಶ ಸಾಧ್ಯವಾಗಿದೆ. ತೃತೀಯ ವರ್ಷದ ಫಲಿತಾಂಶದಲ್ಲಿ ಸಿ. ಪ್ರತಿ–ಕ್ಷ ಅವರು 89 ಶೇಕಡಾ ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಜ್ಯೋತಿ ಅವರು 85.75 ಶೇಕಡಾ ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಗಾಯತ್ರಿ ಅವರು 84.5 ಶೇಕಡಾ ಅಂಕಗಳನ್ನು





ಪಡೆದು ತೃತೀಯ ಸ್ಥಾನ ಗಳಿಸಿದ್ದಾರೆ. ದ್ವಿತೀಯ ವರ್ಷದ ಫಲಿತಾಂಶದಲ್ಲಿ ದೀಪ ಜಿ ಹಾಗೂ ಪಾರ್ವತಮ್ಮ ಅವರು ತಲಾ 83.28 ಶೇಕಡಾ ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಹಂಚಿಕೊಂಡಿದ್ದಾರೆ.

ಮುಸ್ಕಾನ್ ಅವರು 82 ಶೇಕಡಾ ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದು, ಮಂಜುನಾಥ್ ಅವರು 81 ಶೇಕಡಾ ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ.




ಪ್ರಥಮ ವರ್ಷದ ಫಲಿತಾಂಶದಲ್ಲಿ ಲಕ್ಷ್ಮೀದೇವಿ ಅವರು 79 ಶೇಕಡಾ ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದು, ಸಮ್ರಿನ್ ಅವರು 77.8 ಶೇಕಡಾ ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಯಶೋಧ ಲಕ್ಷ್ಮಿ ಅವರು 77 ಶೇಕಡಾ ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದ್ದು, ಎಲ್ಲಾ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದೆ.

ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಇರ್ಫಾನ್




ಕೆ. ಅತ್ತಾರ್, ಕಾರ್ಯದರ್ಶಿಗಳಾದ ಶ್ರೀ ಇರ್ಷಾದ್ ಅತ್ತಾರ್, ಪ್ರಾಂಶುಪಾಲರಾದ ಶ್ರೀ ಲಾಜರ್ ಸಿರಿಲ್ ಜಿ ಹಾಗೂ ಉಪನ್ಯಾಸಕ ವೃಂದ ಮತ್ತು ಸಿಬ್ಬಂದಿಗಳು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, “ನರ್ಸಿಂಗ್ ವೃತ್ತಿ ಕೇವಲ ಉದ್ಯೋಗವಲ್ಲ; ಅದು ಮಾನವ ಸೇವೆಯ ಮಹತ್ವದ ಧರ್ಮವಾಗಿದೆ. ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಜೊತೆಗೆ ಸೇವಾಭಾವವನ್ನು ಬೆಳೆಸಿಕೊಂಡು ಸಮಾಜಕ್ಕೆ ಉತ್ತಮ ಆರೋಗ್ಯ ಸೇವೆ ನೀಡಬೇಕು” ಎಂದು ಪ್ರೇರಣಾದಾಯಕ ಸಂದೇಶ ನೀಡಿದರು.

ಸಂಸ್ಥೆಯಲ್ಲಿ ಶಿಸ್ತಿನ ಶಿಕ್ಷಣ ವ್ಯವಸ್ಥೆ, ಅನುಭವಸಂಪನ್ನ ಉಪನ್ಯಾಸಕರ ಮಾರ್ಗದರ್ಶನ ಹಾಗೂ ವಿದ್ಯಾರ್ಥಿಗಳ ನಿರಂತರ ಪರಿಶ್ರಮದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿಯೂ ಉತ್ತಮ ನರ್ಸ್‌ಗಳನ್ನು ತಯಾರಿಸಿ ಆರೋಗ್ಯ ಕ್ಷೇತ್ರಕ್ಕೆ ಕೊಡುಗೆ ನೀಡುವಲ್ಲಿ ಸಂಸ್ಥೆ ಮುಂಚೂಣಿಯಲ್ಲಿ ಇರಲಿದೆ ಎಂದು ಆಡಳಿತ ಮಂಡಳಿ ವಿಶ್ವಾಸ ವ್ಯಕ್ತಪಡಿಸಿದೆ. ವಿದ್ಯಾರ್ಥಿಗಳ ಈ ಸಾಧನೆ ಕಾಲೇಜಿನ ಗೌರವವನ್ನು ಮತ್ತಷ್ಟು ಹೆಚ್ಚಿಸಿದ್ದು, ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಕಾಲೇಜಿನ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದ ಶುಭ ಹಾರೈಸಿದ್ದಾರೆ.